# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜೂನ್ 26, 2021

ಸಂಪುಟ : 48 ಸಂಚಿಕೆ : 43 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಡೆಲ್ಟಾ ಪ್ಲಸ್: ಆತಂಕ ಬೇಡ

ಬೆಂಗಳೂರು, ಜೂ. 25 - ಕೋವಿಡ್ ಡೆಲ್ಟಾ ಪ್ಲಸ್ ವೈರಾಣುವಿನ ಬಗ್ಗೆ ಹೆಚ್ಚೇನೂ ಆತಂಕಪಡುವ ಅವಶ್ಯಕತೆ ಇಲ್ಲ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕೋವಿಡ್ ಡೆಲ್ಟಾ ಪ್ಲಸ್ ವೈರಾಣುವಿನ ಒಂದು ಪ್ರಕರಣ ಬೆಂಗಳೂರಿನಲ್ಲಿ ಮತ್ತು ಇನ್ನೊಂದು ಪ್ರಕರಣ ಮೈಸೂರಿನಲ್ಲಿ ಕಂಡುಬಂದಿದೆ. ಇಬ್ಬರೂ ಸೌಮ್ಯ ಲಕ್ಷಣಗಳನ್ನು ಹೊಂದಿದ ರೋಗಿಗಳಾಗಿದ್ದಾರೆ. ಮೈಸೂರಿನ ರೋಗಿ ಸಂಪೂರ್ಣ ಗುಣಮುಖರಾಗಿದ್ದಾರೆ. ಈ ಹೊಸ ವೈರಾಣುವಿನಿಂದ ಸೋಂಕಿತರಿಗೆ ಹೆಚ್ಚು ಸಮಸ್ಯೆಯೇನೂ ಆಗಿಲ್ಲ. ಇವರ ಸಂಪರ್ಕಿತರಿಗೂ ಪರೀಕ್ಷೆ ಮಾಡಿಸಿ ನೋಡಿದಾಗಲೂ ನೆಗೆಟಿವ್ ವರದಿ ಬಂದಿದೆ. ಆದ್ದರಿಂದ ಈ ವೈರಾಣು ಬಗ್ಗೆ ವಿಶೇಷವಾಗಿ ಆತಂಕಪಡುವ ಅಗತ್ಯವಿಲ್ಲ. ಪ್ರತಿ ದಿನ ಜೀನೋಮ್ ಸೀಕ್ವೆನ್ಸಿಂಗ್ ಆಗುತ್ತಿರುತ್ತದೆ. ಈ ವೇಳೆ ವೈರಾಣು ಪತ್ತೆಯಾಗುತ್ತದೆ ಎಂದರು.

**ಹೊಸ ವೈರಾಣುವಿನಿಂದ ಸೋಂಕಿತರಿಗೆ ಹೆಚ್ಚು ಸಮಸ್ಯೆಯೇನೂ ಆಗಿಲ್ಲ. ಇವರ ಸಂಪರ್ಕಿತರಿಗೂ ಪರೀಕ್ಷೆ ಮಾಡಿಸಿ ನೋಡಿದಾಗಲೂ ನೆಗೆಟಿವ್ ವರದಿ ಬಂದಿದೆ.**
**- ಡಾ.ಕೆ.ಸುಧಾಕರ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ**

ಕೇರಳದಲ್ಲಿ ಸೋಂಕು ಹೆಚ್ಚಿದ್ದು, ಪಾಸಿಟಿವಿಟಿ ದರ ಶೇ. 10 ಕ್ಕಿಂತ ಅಧಿಕವಾಗಿದೆ. ನಮ್ಮ ರಾಜ್ಯ ಕೇರಳ ಗಡಿ ಹಂಚಿಕೊಳ್ಳುವುದರಿಂದ ಬಹಳ ಎಚ್ಚರಿಕೆಯಿಂದ ಇರಬೇಕು. ಅದೇ ರೀತಿ ಮಹಾರಾಷ್ಟ್ರ ಕೂಡ ಗಡಿ ಹಂಚಿಕೊಂಡಿದೆ. ಗಡಿಭಾಗದ ಜಿಲ್ಲೆಗಳಲ್ಲಿ ಹೆಚ್ಚು ಪರೀಕ್ಷೆ ಮಾಡಬೇಕು, ಮುಂಜಾಗ್ರತಾ ಕ್ರಮ ವಹಿಸಬೇಕು, ಅಲ್ಲಿಂದ ಒಳಬರುವ ಪ್ರಯಾಣಿಕರಿಗೆ ರಾಂಡಮ್ ಪರೀಕ್ಷೆ ಮಾಡಬೇಕು ಎಂದು ಜಿಲ್ಲಾಡಳಿತಗಳಿಗೆ ಸೂಚಿಸಲಾಗಿದೆ ಎಂದರು.

ಗಡಿಭಾಗಗಳನ್ನು ಮುಚ್ಚುವುದು ಸಮಂಜಸವಲ್ಲ. ಆದರೆ ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬಸ್, ರೈಲು ಎಲ್ಲಿಂದ ಬಂದರೂ ಆಯಾ ನಿಲ್ದಾಣಗಳಲ್ಲಿ ಎಚ್ಚರ ವಹಿಸಬೇಕು. ಬೆಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ಹುಬ್ಬಳ್ಳಿಯ ನಾಲ್ಕು ವೈದ್ಯಕೀಯ ಕಾಲೇಜುಗಳು ಹಾಗೂ ಮಂಗಳೂರು ಮತ್ತು ವಿಜಯಪುರ ಜಿಲ್ಲಾಸ್ಪತ್ರೆಗಳಲ್ಲಿ ಒಟ್ಟು 6 (3ನೇ ಪುಟಕ್ಕೆ)

# ನಿರ್ಬಂಧಗಳು ಮತ್ತಷ್ಟು ಸಡಿಲ

## ಬೆಳಿಗ್ಗೆ 6ರಿಂದ ಸಂಜೆ 5ರವರೆಗೆ ಅಂಗಡಿಗಳಿಗೆ ಡಿಸಿ ಅನುಮತಿ

## ವಾರಾಂತ್ಯದ ಕರ್ಫ್ಯೂ ಹಿನ್ನೆಲೆ: ಸೋಮವಾರದಿಂದ ಆದೇಶ ಅನ್ವಯ

ದಾವಣಗೆರೆ, ಜೂ. 25 - ಜಿಲ್ಲೆಯಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ, ದಾವಣಗೆರೆಯನ್ನು 'ಎ' ವರ್ಗಕ್ಕೆ ಸೇರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದರಿಂದಾಗಿ ಅಂಗಡಿಗಳು ಹಾಗೂ ಹೋಟೆಲ್‌ಗಳ ಕಾರ್ಯನಿರ್ವಹಣೆಗೆ ಹೆಚ್ಚಿನ ವಿನಾಯಿತಿ ನೀಡಲಾಗಿದೆ.

ಚಾಮರಾಜನಗರ, ದಾವಣಗೆರೆ ಹಾಗೂ ಚಿಕ್ಕಮಗಳೂರುಗಳನ್ನು ಒಂದನೇ ವರ್ಗಕ್ಕೆ ಸೇರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಮೈಸೂರನ್ನು ಎರಡನೇ ವರ್ಗಕ್ಕೆ ಸೇರಿಸಲಾಗಿದೆ.

ಒಂದನೇ ವರ್ಗಕ್ಕೆ ಸೇರಿದ ಹಿನ್ನೆಲೆಯಲ್ಲಿ ಆದೇಶವೊಂದನ್ನು ಹೊರಡಿಸಿರುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಲ್ಲ ಅಂಗಡಿಗಳು ಬೆಳಿಗ್ಗೆ 6ರಿಂದ ಸಂಜೆ 5ರವರೆಗೆ ವಹಿವಾಟು ನಡೆಸಬಹುದು ಎಂದು ತಿಳಿಸಿದ್ದಾರೆ. ಆದರೆ, ಹವಾನಿಯಂತ್ರಿತ ಶಾಪಿಂಗ್ ಕಾಂಪ್ಲೆಕ್ಸ್, ಮಾಲ್‌ಗಳಿಗೆ ಅನುಮತಿ ದೊರೆತಿಲ್ಲ.

ಎಲ್ಲಾ ಹೋಟೆಲ್, ರೆಸ್ಟೋರೆಂಟ್, ಬಾರ್ ಹಾಗೂ ಕ್ಲಬ್‌ಗಳು ಬೆಳಿಗ್ಗೆ 6ರಿಂದ ಸಂಜೆ 5ರವರೆಗೆ ಶೇ.50ರ ಸಾಮರ್ಥ್ಯದಲ್ಲಿ ಗ್ರಾಹಕರಿಗೆ ಸ್ಥಳದಲ್ಲೇ ಸೇವೆ ಸಲ್ಲಿಸಲು ಅನುಮತಿ ನೀಡಲಾಗಿದೆ. ಆದರೆ, ಊಟದ ಜೊತೆಗೆ ಮದ್ಯವನ್ನು ಪೂರೈಸುವಂತಿಲ್ಲ. ಹವಾನಿಯಂತ್ರಿತ ಹೋಟೆಲ್ ಇತ್ಯಾದಿಗಳು ಕಾರ್ಯ ನಿರ್ವಹಿಸುವಂತಿಲ್ಲ.

**ವಾರಾಂತ್ಯದ ಕರ್ಫ್ಯೂ ಅವಧಿಯಲ್ಲಿ ಅಗತ್ಯ ವಸ್ತುಗಳ ಅಂಗಡಿ ತೆರೆಯಲು ಬೆಳಿಗ್ಗೆ 6 ರಿಂದ 2ರವರೆಗೆ ಅವಕಾಶ**

ಲಾಡ್ಜ್, ರೆಸಾರ್ಟ್ ಇತ್ಯಾದಿಗಳು ಶೇ.50ರ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಲು ಅನುಮತಿ ನೀಡಲಾಗಿದೆ.

ಪಾರ್ಕ್‌ಗಳು ಬೆಳಿಗ್ಗೆ 5ರಿಂದ ಸಂಜೆ 6ರವರೆಗೆ ಸಾರ್ವಜನಿಕರಿಗಾಗಿ ತೆರೆದಿರುತ್ತವೆ. ಆದರೆ, ಇಲ್ಲಿ ಯಾವುದೇ ಗುಂಪು ಚಟುವಟಿಕೆಗಳನ್ನು ನಡೆಸುವಂತಿಲ್ಲ. ಹವಾನಿಯಂತ್ರಣ ರಹಿತವಾದ ಜಿಮ್‌ಗಳು ಶೇ.50ರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿದೆ. ಪ್ರೇಕ್ಷಕರ ರಹಿತವಾಗಿ ಎಲ್ಲಾ ಹೊರಾಂಗಣ ಕ್ರೀಡಾ ಚಟುವಟಿಕೆಗಳಿಗೆ ಅನುಮತಿ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಬೀಳಗಿ ತಿಳಿಸಿದ್ದಾರೆ.

ಜುಲೈ 5ರವರೆಗೆ ಅನ್ವಯವಾಗುವಂತೆ ಈ ವಿನಾಯಿತಿಗಳನ್ನು ಪ್ರಕಟಿಸಲಾಗಿದೆ. ಪ್ರಸಕ್ತ ಶನಿವಾರ ಹಾಗೂ ಭಾನುವಾರದಂದು ವಾರಾಂತ್ಯದ ಕರ್ಫ್ಯೂ ಇದೆ. ಈ ಹಿನ್ನೆಲೆಯಲ್ಲಿ ಸೋಮವಾರದಿಂದ ವಿನಾಯಿತಿಗಳು ದೊರೆಯಲಿವೆ.

ವಾರಾಂತ್ಯದ ಕರ್ಫ್ಯೂ ಅವಧಿಯಲ್ಲಿ ಆಹಾರ, ದಿನಸಿ, ಹಣ್ಣು, ತರಕಾರಿ, ಮಾಂಸ, ಮೀನು, ಹಾಲು, ಹಾಲಿನ ಬೂತ್‌ಗಳು ಮತ್ತು ಜಾನುವಾರು ಮೇವಿನ ಅಂಗಡಿಗಳು ಬೆಳಿಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ಕಾರ್ಯ ನಿರ್ವಹಿಸಬಹುದು. ಮದ್ಯದ ಅಂಗಡಿಗಳು ಬೆಳಿಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ಪಾರ್ಸೆಲ್ ನೀಡಬಹುದು.

ತುರ್ತು ಹಾಗೂ ಅಗತ್ಯ ಸೇವೆಗಳಿಗೆ ಹಿಂದಿನಂತೆಯೇ ಅನುಮತಿ ಇದೆ. ಬಸ್, ರೈಲು ಹಾಗೂ ವಿಮಾನಯಾನಗಳಿಗೆ ಅನುಮತಿ ಇದೆ. ನಿಗದಿಯಾದ ಮದುವೆಗಳು ಹಾಗೂ ಅಂತ್ಯಕ್ರಿಯೆಗಳಿಗೆ ನಿರ್ಬಂಧಿತ ಅನುಮತಿ ಇದೆ.

## ಐ.ಟಿ. ಗಡುವು, ತೆರಿಗೆ ವಿನಾಯಿತಿ

ನವದೆಹಲಿ, ಜೂ. 25 – ಆದಾಯ ತೆರಿಗೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹಲವು ಗಡುವುಗಳನ್ನು ವಿಸ್ತರಿಸಿದೆ ಹಾಗೂ ಕೊರೊನಾ ಚಿಕಿತ್ಸೆಗೆ ಸಂಬಂಧಿಸಿದಂತೆ ಹಲವು ವಿನಾಯಿತಿಗಳನ್ನು ನೀಡಿದೆ. ಕೊರೊನಾದಿಂದ ಸಾವು ಸಂಭವಿಸಿದಾಗ ಉದ್ಯೋಗದಾತರು ಮೃತರ ಕುಟುಂಬದವರಿಗೆ (3ನೇ ಪುಟಕ್ಕೆ)

## 89 ಪಾಸಿಟಿವ್ 299 ಗುಣಮುಖ

ದಾವಣಗೆರೆ, ಜೂ.25- ಜಿಲ್ಲೆಯಲ್ಲಿ ಶುಕ್ರವಾರ 89 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 5 ಜನರು ಮೃತಪಟ್ಟಿದ್ದಾರೆ. 299 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 35, ಹರಿಹರ 16, (3ನೇ ಪುಟಕ್ಕೆ)

## ಉಪ್ಪು ನೀರನ್ನೇ ಲಸಿಕೆ ಎಂದು ವಂಚನೆ

ಮುಂಬೈ, ಜೂ. 25 – ಮುಂಬೈನ ಹಲವೆಡೆ ನಕಲಿ ಕೊರೊನಾ ಲಸಿಕೆ ಹಾಕುವ ದಂಧೆ ನಡೆಸಿದ ಜಾಲವನ್ನು ಬಯಲಿಗೆ ಎಳೆದಿರುವ ಪೊಲೀಸರು, ಹತ್ತು ಜನರನ್ನು ಬಂಧಿಸಿದ್ದಾರೆ.

ಉಪ್ಪು ನೀರನ್ನೇ ಕೊರೊನಾ ಲಸಿಕೆ ಎಂದು ಹೇಳಿ ಇವರು ದಂಧೆ ನಡೆಸುತ್ತಿದ್ದರು. (3ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 153 ಅಡಿ 7 ಇಂಚು
ಒಳ ಹರಿವು: 1944 ಕ್ಯೂಸೆಕ್ಸ್
ಹೊರ ಹರಿವು : 81 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 138.3 ಅಡಿ





**ಖರೀದಿ, ಆಯ್ಕೆ**

ಜಿಲ್ಲೆಯಲ್ಲಿ ಲಾಕ್‌ಡೌನ್ ನಿರ್ಬಂಧಗಳು ಸಡಿಲಗೊಳ್ಳುತ್ತಲೇ ದಾವಣಗೆರೆ ನಗರದಲ್ಲಿ ವಿವಿಧ ವಸ್ತುಗಳ ಮಾರಾಟ ಹಾಗೂ ಖರೀದಿ ಹೆಚ್ಚಾಗಿದೆ. ಶುಕ್ರವಾರ ಕಾಳಿಕಾದೇವಿ ರಸ್ತೆಯಲ್ಲಿ ಮಹಿಳೆಯೊಬ್ಬರು ಅಗತ್ಯ ವಸ್ತುಗಳನ್ನು ಕೊಂಡೊಯ್ಯುತ್ತಿದ್ದಾರೆ. ಮತ್ತೊಂದು ಚಿತ್ರದಲ್ಲಿ ಮಹಿಳೆಯರಿಬ್ಬರು ಮಾಸ್ಕ್ ಆಯ್ಕೆಯಲ್ಲಿ ಬ್ಯುಸಿಯಾಗಿದ್ದಾರೆ.

## 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಲಸಿಕೆ : ಡಿಸಿ

ದಾವಣಗೆರೆ, ಜೂ.25 - ಸರ್ಕಾರದ ಸೂಚನೆಯಂತೆ ಜಿಲ್ಲೆಯಲ್ಲಿನ 18 ವರ್ಷ ಮೇಲ್ಪಟ್ಟ ಎಲ್ಲಾ ವಿದ್ಯಾರ್ಥಿಗಳು, ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿಗೆ ಒಂದು ವಾರದೊಳಗಾಗಿ ಆದ್ಯತೆ ಮೇರೆಗೆ ಕೋವಿಡ್ ನಿರೋಧಕ ಲಸಿಕೆ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ತಮ್ಮ ಕಚೇರಿಯಲ್ಲಿ ಶುಕ್ರವಾರ ಏರ್ಪಡಿಸಿದ್ದ ರಾಜ್ಯ ಮಟ್ಟದ ವಿಡಿಯೋ ಸಂವಾದದ ಬಳಿಕ ಮಾತನಾಡಿದ ಅವರು, ಜಿಲ್ಲೆಯಲ್ಲಿ ಲಸಿಕೆ ನೀಡಲು ಅರ್ಹರಿರುವ ವಿದ್ಯಾರ್ಥಿಗಳನ್ನು ಗುರುತಿಸಲಾಗಿದ್ದು, 50,132 ವಿದ್ಯಾರ್ಥಿಗಳು, 3,619 ಬೋಧಕರು ಹಾಗೂ 1,905 ಬೋಧಕೇತರ ಸಿಬ್ಬಂದಿಗಳು ಸೇರಿದಂತೆ ಒಟ್ಟು 55,656 ಜನರಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ ಎಂದರು.

ಲಸಿಕೆ ನೀಡಲು ಎಲ್ಲಾ ಕಾಲೇಜುಗಳಲ್ಲಿ ಲಸಿಕಾ ಕ್ಯಾಂಪ್ ಆಯೋಜಿಸಲಾಗುವುದು. ಲಸಿಕೆ ಲಭ್ಯತೆ ಆಧಾರದ ಮೇಲೆ (3ನೇ ಪುಟಕ್ಕೆ)

## ಶಾಲಾರಂಭ ಸೋಮವಾರ ನಿರ್ಧಾರ

### ಆರೋಗ್ಯ ಇಲಾಖೆ ಸಲಹೆ ಪಡೆದು ಭೌತಿಕ ತರಗತಿ ಬಗ್ಗೆ ನಿರ್ಧಾರ

ಬೆಂಗಳೂರು, ಜೂ. 25 - ಶಾಲೆಗಳನ್ನು ಆರಂಭ ಮಾಡುವ ಸಂಬಂಧ ಸೋಮವಾರ ನಿರ್ಧಾರ ಕೈಗೊಳ್ಳುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್‌ಕುಮಾರ್ ತಿಳಿಸಿದ್ದಾರೆ.



ಶಾಲೆಗಳ ಪುನರಾರಂಭಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳ ಕಲಿಕಾ ನಿರಂತರತೆ, ಕಲಿಕಾ ಸಾಮಗ್ರಿ, ಕಲಿಕಾ ನಿರಂತರ ಮೌಲ್ಯಮಾಪನ ಕುರಿತು ಕಾಲಕಾಲಕ್ಕೆ ಸಲಹೆ ನೀಡಲು ಸಮಾಜದ ವಿವಿಧ ಸ್ಥರಗಳ ವ್ಯಕ್ತಿಗಳು, ಶಿಕ್ಷಣ ತಜ್ಞರನ್ನೊಳಗೊಂಡ ಕಾರ್ಯಪಡೆಯನ್ನು ರಚಿಸಿ, ವಿದ್ಯಾರ್ಥಿ ಕಲಿಕೆಯ ಪರಾಮರ್ಶೆಗೆ ನಿರಂತರ ಸೂತ್ರವನ್ನು ರಚಿಸಲಾಗುವುದು ಎಂದರು.

ಕೋವಿಡ್ ಕಾಲಘಟ್ಟದಲ್ಲಿ ಶಾಲಾರಂಭ ಸೇರಿದಂತೆ ಮಕ್ಕಳ ಕಲಿಕಾ ನಿರಂತರತೆ ಮತ್ತು ಡಾ. ದೇವಿಶೆಟ್ಟಿ ಸಮಿತಿ ವರದಿ ಕುರಿತು ಚರ್ಚಿಸಲು ಶುಕ್ರವಾರ ವಿವಿಧ ಶಿಕ್ಷಣ ತಜ್ಞರು, ಶಿಕ್ಷಣ ಕುರಿತ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳ ಸಭೆಯ ನಂತರ ಮಾತನಾಡಿದ ಅವರು, ಸಭೆಯಲ್ಲಿ ಶಾಲಾರಂಭ ಕುರಿತು ಹಲವಾರು ಅಭಿಪ್ರಾಯಗಳು ವ್ಯಕ್ತವಾಗಿದ್ದು, ಎಲ್ಲ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಒಂದು ನಿರ್ಧಾರಕ್ಕೆ ಬರಲಾಗುವುದು ಎಂದರು.

ನಾವು ಭೌತಿಕ ತರಗತಿಗಳ ವಿಷಯದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವುದಕ್ಕೂ ಮೊದಲು ಆರೋಗ್ಯ ಇಲಾಖೆಯ ಸಲಹೆ ಪಡೆದೇ ಮುಂದುವರೆಯಲಾಗುವುದು ಎಂದು ಸುರೇಶ್ ಕುಮಾರ್ ತಿಳಿಸಿದರು.

ಶಾಲೆಗಳಿಂದ ಮಕ್ಕಳನ್ನು ಬಹುಕಾಲ ದೂರ ಉಳಿಸುವುದು ಮಕ್ಕಳ ಹಿತರಕ್ಷಣೆಯ ದೃಷ್ಟಿಯಿಂದ ಒಳ್ಳೆಯದಲ್ಲ. ಹಾಗೆಯೇ ಯಾವುದೇ ಶಾಲೆಯಿಂದ ಕೋವಿಡ್ ಹರಡಿದ ನಿದರ್ಶನಗಳಿಲ್ಲವಾದ್ದರಿಂದ ಶಾಲೆಗಳನ್ನು ಸಾಧ್ಯವಾದಷ್ಟು ಬೇಗ ತೆರೆಯಬಹುದು. ಶಾಲಾರಂಭವನ್ನು ಆಯಾ ಪ್ರದೇಶವಾರು ಕೋವಿಡ್ ಕನಿಷ್ಠ ಪಾಸಿಟಿವಿಟಿ ಆಧಾರದಲ್ಲಿ ತೆರೆಯಬಹುದೆಂಬ ಡಾ. ದೇವಿಶೆಟ್ಟಿ ವರದಿಯ ಅಂಶಗಳನ್ನು ಪ್ರಧಾನವಾಗಿಟ್ಟುಕೊಂಡು ಅಭಿಪ್ರಾಯ ವ್ಯಕ್ತಪಡಿಸಿದ ಪ್ರತಿಯೊಬ್ಬ ಪ್ರತಿನಿಧಿಗಳು, (3ನೇ ಪುಟಕ್ಕೆ)

## ಮದುವೆ ಸಮಾರಂಭಕ್ಕೆ ಷರತ್ತಿನ ಅನುಮತಿ

ಬೆಂಗಳೂರು, ಜೂ. 25- ಕಲ್ಯಾಣ ಮಂಟಪ ಹೋಟೆಲ್ ಪಾರ್ಟಿ ಹಾಲ್ ಮತ್ತು ರೆಸಾರ್ಟ್ ಗಳಲ್ಲಿ 40 ಜನಕ್ಕೆ ಸೀಮಿತಗೊಳಿಸಿ ಅನುಮತಿ ತೆಗೆದುಕೊಂಡು ವೈಯಕ್ತಿಕ ಪಾಸ್ ಗಳೊಂದಿಗೆ ಸೋಮವಾರ ದಿಂದ ಜಾರಿಗೆ ಬರುವಂತೆ ಮದುವೆ ಸಮಾರಂಭಗಳಿಗೆ ಅನುಮತಿ ನೀಡಲು ಇಂದಿಲ್ಲಿ ತೀರ್ಮಾನಿಸಲಾಗಿದೆ.

ಮುಖ್ಯಮಂತ್ರಿಗಳು ತಮ್ಮ ನಿವಾಸದಲ್ಲಿ ಸಚಿವರು ಹಾಗು ಅಧಿಕಾರಿಗಳ ಜೊತೆ ಕೋವಿಡ್ -19 ನಿಯಂತ್ರಣದ ಕುರಿತು ನಡೆಸಿದ ಚರ್ಚೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಕೋವಿಡ್ 19 ರ ರೂಪಾಂತರಿ (3ನೇ ಪುಟಕ್ಕೆ)

## ಮಾಸ್ಕ್ ಧರಿಸದೇ ಬ್ಯಾಂಕ್‌ಗೆ ನುಗ್ಗಿದ ವ್ಯಕ್ತಿ ಮೇಲೆ ಗುಂಡು

ಬರೈಲಿ (ಉತ್ತರ ಪ್ರದೇಶ), ಜೂ. 25 – ಮಾಸ್ಕ್ ಇಲ್ಲದೇ ಬ್ಯಾಂಕ್ ಒಳಗೆ ಬಲವಂತವಾಗಿ ನುಗ್ಗಲು ಯತ್ನಿಸಿದ ವ್ಯಕ್ತಿಯ ಕಡೆ ಭದ್ರತಾ ಸಿಬ್ಬಂದಿಯೋರ್ವ ಗುಂಡು ಹಾರಿಸಿದ ಘಟನೆ ಇಲ್ಲಿನ ಬ್ಯಾಂಕ್ ಆಫ್ ಬರೋಡಾದ ಜಂಕ್ಷನ್ ರಸ್ತೆ ಶಾಖೆಯಲ್ಲಿ ನಡೆದಿದೆ.

ರಾಜೇಶ್ ಕುಮಾರ್ (3ನೇ ಪುಟಕ್ಕೆ)

## ನಗರ ಸಹಕಾರಿ ಬ್ಯಾಂಕುಗಳ ಎಂ.ಡಿ, ನಿರ್ದೇಶಕರಿಗೆ ವಿದ್ಯಾರ್ಹತೆ ನಿಗದಿ

ಮುಂಬೈ, ಜೂ. 25 - ನಗರ ಸಹಕಾರಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು (ಎಂ.ಡಿ.) ಹಾಗೂ ಪೂರ್ಣ ಕಾಲಿಕ ನಿರ್ದೇಶಕರಿಗೆ (ಡಬ್ಲ್ಯೂ.ಟಿ.ಡಿ.) ರಿಸರ್ವ್ ಬ್ಯಾಂಕ್ ವಿದ್ಯಾರ್ಹತೆ ಹಾಗೂ ಮಾನದಂಡಗಳನ್ನು ನಿದಿಪಡಿಸಿ ಆದೇಶ ಹೊರಡಿಸಿದೆ.

ಸಂಸದರು, ಶಾಸಕರು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರು ನಗರ ಸಹಕಾರ ಬ್ಯಾಂಕುಗಳಲ್ಲಿ ಯಾವುದೇ ಹುದ್ದೆ ಹೊಂದುವಂತಿಲ್ಲ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

ವ್ಯವಸ್ಥಾಪಕ ನಿರ್ದೇಶಕರು ಹಾಗೂ ಪೂರ್ಣ ಕಾಲಿಕ ನಿರ್ದೇಶಕರು ಸ್ನಾತಕೋತ್ತರ ಪದವಿ ಇಲ್ಲವೇ ಹಣಕಾಸು ಶಿಸ್ತಿನ ಅರ್ಹತೆ ಹೊಂದಿರಬೇಕು. ಅವರು ಲೆಕ್ಕ ಪರಿಶೋಧಕ, ಎಂಬಿಎ (ಹಣಕಾಸು) ಇಲ್ಲವೇ ಬ್ಯಾಂಕಿಂಗ್ ಇಲ್ಲವೇ ಸಹಕಾರಿ ಉದ್ಯಮ ನಿರ್ವಹಣೆಯ ಡಿಪ್ಲೋಮಾ ಹೊಂದಿರಬೇಕು ಎಂದು ನಿರ್ಬಂಧಿಸಲಾಗಿದೆ. 35 ವರ್ಷಕ್ಕಿಂತ ಹೆಚ್ಚಿನ ಹಾಗೂ 70 (3ನೇ ಪುಟಕ್ಕೆ)

## ಅವಳಿ ತಾ.ಗಳಲ್ಲಿ 2 ಸಾವಿರ ಹಾಸಿಗೆಗಳ ಆಸ್ಪತ್ರೆ ಸಿದ್ಧ



**ಕೊರೊನಾದ 3ನೇ ಅಲೆ ಎದುರಿಸಲು ಸಜ್ಜುಗೊಂಡ ಹೊನ್ನಾಳಿ-ನ್ಯಾಮತಿ ತಾ.ಗಳು**

**ಸೋಂಕು ಗುಣಮುಖರಾದವರಿಗೆ ಹೂಮಳೆ ಸುರಿಸಿ ಬೀಳ್ಕೊಟ್ಟ ಶಾಸಕ ಎಂ.ಪಿ. ರೇಣುಕಾಚಾರ್ಯ**


ಹೊನ್ನಾಳಿ, ಜೂ.25- ಸಂಭವನೀಯ ಕೊರೊನಾ ಮೂರನೇ ಅಲೆ ವೇಳೆ ಸೋಂಕು ಪೀಡಿತರ ಚಿಕಿತ್ಸೆಗಾಗಿ ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕುಗಳಾದ್ಯಂತ ಎರಡು ಸಾವಿರ ಹಾಸಿಗೆಗಳ ಸುಸಜ್ಜಿತ ಕಟ್ಟಡಗಳಲ್ಲಿ ಈಗಾಗಲೇ ತಾಲ್ಲೂಕು ಆಡಳಿತ ಸಕಲ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡಿದೆ ಎಂದು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಅರಬಗಟ್ಟೆ ಗ್ರಾಮದ ಕೋವಿಡ್ ಕೇರ್ ಸೆಂಟರ್‌ನಲ್ಲಿ ಶುಕ್ರವಾರ ಸೋಂಕಿನಿಂದ ಗುಣಮುಖರಾಗಿ ಮನೆಗೆ ತೆರಳಿದವರಿಗೆ ಹೂಮಳೆ ಸುರಿಸಿ ಆತ್ಮೀಯವಾಗಿ ಬೀಳ್ಕೊಟ್ಟ ನಂತರ ಅವರು ಮಾತನಾಡಿದರು.

ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳಾದ್ಯಂತ ಕೊರೊನಾ ಎರಡನೇ ಅಲೆ ಕಡಿಮೆಯಾಗಿದೆ. ಮೂರನೇ ಅಲೆ ಜುಲೈ-ಆಗಸ್ಟ್ ತಿಂಗಳುಗಳಲ್ಲಿ ಬರಬಹುದು ಎಂದು ತಜ್ಞರು ಹೇಳುತ್ತಿದ್ದಾರೆ. ಈ ನಿಟ್ಟಿನಲ್ಲಿ ತಾಲ್ಲೂಕು ಆಡಳಿತ ಮೂರನೇ ಅಲೆಯನ್ನು ಎದುರಿಸಲು ಸಕಲ ರೀತಿಯಲ್ಲಿ ಸಜ್ಜಾಗಿದೆ ಎಂದು ತಿಳಿಸಿದರು.

**ಹೂ ಮಳೆ:** ಅರಬಗಟ್ಟೆ ಗ್ರಾಮದ ಕೋವಿಡ್ ಕೇರ್ ಸೆಂಟರ್‌ನಿಂದ ಶುಕ್ರವಾರ 32 ಜನರು ಗುಣಮುಖರಾಗಿ ಮನೆಗೆ ತೆರಳಿದರು. ಅವರಿಗೆ ಪುಷ್ಪ ವೃಷ್ಟಿ ಮೂಲಕ (3ನೇ ಪುಟಕ್ಕೆ)


**ಸವಿನೆನಪು**



ಲಿ॥ ಮಾಗಾನಹಳ್ಳಿ ಮಹಾದೇವಪ್ಪ
24ನೇ ಪುಣ್ಯಸ್ಮರಣೆ



ಲಿ॥ ಶ್ರೀಮತಿ ಪುಟ್ಟಮ್ಮ
17ನೇ ಪುಣ್ಯಸ್ಮರಣೆ

ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಶ್ರೀ ಗುರುಬಕ್ಕೇಶ್ವರ ಸೇವಾ ಸಂಘದ ಅಧ್ಯಕ್ಷರು, ಸದಸ್ಯರು ಹಾಗೂ ಭಕ್ತಾದಿಗಳು
ಮಗಳು : ಶ್ರೀಮತಿ ಎಂ.ಎಂ. ಸುನಂದ, ಶ್ರೀ ಎಂ.ಹಾಲಪ್ಪ
ಚಿ॥ ಶಶಿಧರ ಎಂ.ಹೆಚ್. ಹಾಗೂ
ಮೆ॥ ಮಾಗಾನಹಳ್ಳಿ ಮಹಾದೇವಪ್ಪನವರು ಹಾಗೂ ಬಂಧು-ಮಿತ್ರರು
ಮೆ॥ ಶಶಿಧರ ಟ್ರೇಡರ್ಸ್, RMC ಯಾರ್ಡ್, ಸಿ ಬ್ಲಾಕ್, ದಾವಣಗೆರೆ.
ಮಾಗಾನಹಳ್ಳಿ ಮುಂಡಾಸ್ ಹಾಗೂ ಬಂಧು-ಮಿತ್ರರು

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪುಣ್ಯಸ್ಮರಣೆ ಪ್ರಯುಕ್ತ ಅನ್ನ ಸಂತರ್ಪಣೆ



**ಎಂ.ಕೆ. ರಾಜಶೇಖರಪ್ಪ ನಿಧನ**



ದಾವಣಗೆರೆ ಮಧು ಟ್ರಾನ್ಸ್‌ಪೋರ್ಟ್ ಮಾಲೀಕರಾದ
ಎಂ. ಕೆ. ರಾಜಶೇಖರಪ್ಪ
ಇವರು ದಿನಾಂಕ 25.6.2021ರ ಶುಕ್ರವಾರ ಮಧ್ಯಾಹ್ನ 1.30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ಪಾರ್ಥಿವ ಶರೀರವನ್ನು
ದಿನಾಂಕ 26. 6.2021ರ ಶನಿವಾರ ಬೆಳಿಗ್ಗೆ 10.00 ಗಂಟೆಗೆ
ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.
ಮಧ್ಯಾಹ್ನ 12.00 ಗಂಟೆಗೆ ಕುಂದುವಾಡ ಕೆರೆಯ ಹತ್ತಿರವಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.
ಇಂತಿ ದುಃಖತಪ್ತ ಕುಟುಂಬ ವರ್ಗ
98441 38240, 98450 55049

# ಸಾವಿರ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ

## ಶ್ಯಾಮ್‌ಪ್ರಸಾದ್ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ರಾಣೇಬೆನ್ನೂರು ಶಾಸಕ ಅರುಣ ಕುಮಾರ ಪೂಜಾರ

ರಾಣೇಬೆನ್ನೂರು, ಜೂ.25- ಮಾನವನ ದುರಾಸೆಗೆ ಅರಣ್ಯ ಕ್ಷೀಣಿಸಿ, ಭೂಮಂಡಲದಲ್ಲಿ ತಾಪಮಾನ ಹೆಚ್ಚಳವಾಗಿದೆ. ಅದರ ಮರುಪೂರಣ ಮಾಡಲು ಮರಗಿಡಗಳನ್ನು ಕಡಿಯದೇ ಉಳಿಸಬೇಕಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ಬಿಜೆಪಿ ಸಂಸ್ಥಾಪಕ ಡಾ. ಶಾಮ್‌ಪ್ರಸಾದ್ ಮುಖರ್ಜಿ ಅವರ ಪುಣ್ಯಸ್ಮರಣೆ ಅಂಗವಾಗಿ ತಾಲ್ಲೂಕು ಬಿಜೆಪಿ ಪದಾಧಿಕಾರಿಗಳ ಮತ್ತು ಕಾರ್ಯಕರ್ತರ ವತಿಯಿಂದ ನಗರದ ಹವಾಲ್ದಾರ್ ಹೊಂಡದ ಹತ್ತಿರ ಪಿಬಿ ರಸ್ತೆ ಬದಿಯಲ್ಲಿ ಪರಿಸರ ರಕ್ಷಣೆ ಪ್ರಯುಕ್ತ ಮೊನ್ನೆ ಏರ್ಪಡಿಸಿದ್ದ ಒಂದು ಸಾವಿರ ಸಸಿ ನೆಟ್ಟು, ನೀರುಣಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಉತ್ತಮ ಆರೋಗ್ಯಕರ ವಾತಾವರಣ ಇಂದಿನ ಅವಶ್ಯಕತೆಗಳಲ್ಲಿ ಒಂದು. ನಮ್ಮ ಮುಂದಿನ ಪೀಳಿಗೆಗಳಿಗೆ ಆಮ್ಲಜನಕ ಸಿಗಬೇಕೆಂದರೆ, ಇಂದಿನಿಂದಲೇ ಮರ ಬೆಳೆಸುವ ಹಾಗೂ ರಕ್ಷಿಸುವ ಪಣತೊಡಬೇಕು. ಭೂ ಮಂಡಲದ ಮೇಲಿರುವ ಸಕಲ ಜೀವಿಗಳಿಗೆ ಪರಿಸರವೇ ಜೀವನಾಧಾರ. ಮರ ಬೆಳೆಸುವ ಹಾಗೂ ರಕ್ಷಿಸುವ ಹೊಣೆ ಪ್ರತಿಯೊಬ್ಬ ನಾಗರಿಕನದ್ದು. ಅದನ್ನು ಪ್ರಾಮಾಣಿಕತೆಯಿಂದ ನಿಭಾಯಿಸಬೇಕು. ಆಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು.



ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದರಾಜ ಕಲಕೋಟಿ ಮಾತನಾಡಿ, ಡಾ. ಶಾಮ್‌ಪ್ರಸಾದ್ ಮುಖರ್ಜಿ ಪುಣ್ಯಸ್ಮರಣೆ ಅಂಗವಾಗಿ ರಾಜ್ಯಾದ್ಯಂತ 11 ಲಕ್ಷ, ಜಿಲ್ಲೆಯಲ್ಲಿ ಒಂದು ಲಕ್ಷ ಸಸಿಗಳನ್ನು ನೆಡುವ ಗುರಿ ಹೊಂದಲಾಗಿದ್ದು, ಪ್ರತಿ ಬೂತ್‌ನಲ್ಲಿ 20 ಸಸಿಗಳಂತೆ ನೆಡಲಾಗುವುದು ಎಂದು ತಿಳಿಸಿದರು.

ನಗರಸಭಾ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ಉಪಾಧ್ಯಕ್ಷೆ ಕಸ್ತೂರಿ ಚಿಕ್ಕಬಿದರಿ, ಸದಸ್ಯರಾದ ಮಲ್ಲಣ್ಣ ಅಂಗಡಿ, ಗಂಗಮ್ಮ ಹಾವನೂರ, ಪ್ರಭಾವತಿ ತಿಳುವಳ್ಳಿ, ಮಂಜುಳಾ ಹತ್ತಿ, ಪ್ರಾದೇಶಿಕ ವಲಯ ಅರಣ್ಯ ಸಂರಕ್ಷಣಾಧಿಕಾರಿ ರವಿ ಹುಲುಕೋಟಿ, ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ ಜಯರಾಜ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ದೀಪಕ್ ಹರಪನಹಳ್ಳಿ, ಮುಖಂಡರಾದ ಜಿ.ಜಿ. ಹೊಟ್ಟಿಗೌಡರ, ಎ.ಬಿ. ಪಾಟೀಲ, ಪವನಕುಮಾರ ಮಲ್ಲಾಡದ, ಅನಿಲ್ ಕುಮಾರ ಸಿದ್ದಾಳಿ, ರಮೇಶ್ ಗುತ್ತಲ ಇನ್ನಿತರರಿದ್ದರು.

## ಹರಿಹರ ತಾ.ನಲ್ಲಿ 798 ಟೆಸ್ಟ್, ಒಂದು ಪಾಸಿಟಿವ್

ಮಲೇಬೆನ್ನೂರು, ಜೂ. 25- ಶುಕ್ರವಾರ ಹರಿಹರ ತಾಲ್ಲೂಕಿನಲ್ಲಿ 798 ಕೋವಿಡ್ ಟೆಸ್ಟ್‌ಗಳಾಗಿದ್ದು, ಈ ಪೈಕಿ 490 ಆರ್‌ಟಿಸಿಪಿಆರ್ ಮತ್ತು 308 ರ‍್ಯಾಪಿಡ್ ಟೆಸ್ಟ್‌ಗಳಾಗಿವೆ. ವಿಶೇಷ ಎಂದರೆ 308 ರ‍್ಯಾಪಿಡ್ ಟೆಸ್ಟ್‌ನಲ್ಲಿ ಒಬ್ಬರಿಗೆ ಮಾತ್ರ ಸೋಂಕು ದೃಢಪಟ್ಟಿದೆ. ಬೆಳಗಿನ ವರದಿ ಪ್ರಕಾರ ಆರ್‌ಟಿಪಿಸಿಆರ್ ಟೆಸ್ಟ್‌ನಲ್ಲಿ ಮೂವರಿಗೆ ಮಾತ್ರ ಪಾಸಿಟಿವ್ ಬಂದಿದೆ.

**97 ಸಕ್ರಿಯ ಕೇಸ್ :** ಹರಿಹರ ತಾಲ್ಲೂಕಿನಲ್ಲಿ ಕೋವಿಡ್ 2ನೇ ಅಲೆಯಲ್ಲಿ ಮಾರ್ಚ್ 16 ರಿಂದ ಇವತ್ತಿನವರೆಗೆ 3290 ಜನರಿಗೆ ಸೋಂಕು ತಗುಲಿದ್ದು, ಸದ್ಯ 97 ಸಕ್ರಿಯ ಪ್ರಕರಣಗಳು ಮಾತ್ರ ಇವೆ ಎಂದು ಟಿಹೆಚ್‌ಓ ಡಾ. ಚಂದ್ರಮೋಹನ್ ತಿಳಿಸಿದ್ದಾರೆ.

ಕೊರೊನಾ ಕೇಸ್‌ಗಳು ಶೇ.5 ಕ್ಕಿಂತ ಕಡಿಮೆಯಾಗಿರುವುದರಿಂದ 2 ಸಿಸಿ ಸೆಂಟರ್‌ಗಳನ್ನು ಮುಚ್ಚಲಾಗಿದೆ. ಗುತ್ತೂರು ಸಿಸಿ ಸೆಂಟರ್ ಮಾತ್ರ ಕಾರ್ಯ ನಿರ್ವಹಿಸುತ್ತಿದೆ.

# ಹರಿಹರ : ಟೈಲರ್, ಛಾಯಾಗ್ರಾಹಕರಿಗೆ ಕಿಟ್ ವಿತರಣೆ

ಹರಿಹರ, ಜೂ.25- ಮೂರನೇ ಅಲೆ ಎದುರಿಸಲು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.



ಇಲ್ಲಿನ ಎಸ್.ಎಂ. ವೀರೇಶ್ ಅಭಿಮಾನಿ ಬಳಗದಿಂದ ಬಂಜಾರ, ಎಸ್.ಎಸ್.ಕೆ. ಸಮಾಜದ ಬಡವರು, ಟೈಲರ್ ಹಾಗೂ ಛಾಯಾಗ್ರಾಹಕರಿಗೆ ಮೊನ್ನೆ ಏರ್ಪಡಿಸಿದ್ದ ದಿನಸಿ ಕಿಟ್‌ಗಳ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದರು.

ರಾಜ್ಯ ಸರ್ಕಾರವು ಕೊರೊನಾ ಮೂರನೇ ಅಲೆಯನ್ನು ಆರಂಭದಿಂದಲೇ ತಡೆಗಟ್ಟಲು ಮುಂಜಾಗ್ರತೆಯಾಗಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಆರೋಗ್ಯ ಇಲಾಖೆಗೆ ಬೇಕಾದ ಸೌಲಭ್ಯಗಳನ್ನು ನೀಡಲಾಗಿದೆ. ಮೂರನೇ ಅಲೆಯು ಮಕ್ಕಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಮಕ್ಕಳ ಆರೋಗ್ಯದ ಬಗ್ಗೆ ನಿಗಾವಹಿಸಲು ಜಿಲ್ಲಾಡಳಿತವು ಸನ್ನದ್ಧವಾಗಿದೆ. ಅಗತ್ಯವಿರುವ ಔಷಧಿ ಹಾಗೂ ಉಪಕರಣಗಳನ್ನು ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದ್ದೇವೆ ಎಂದು ಸಂಸದರು ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಮಾತನಾಡಿದರು.

ಬಿಜೆಪಿ ನಗರ ಘಟಕ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿ ಹೆಚ್. ಮಂಜಾನಾಯ್ಕ, ಮುಖಂಡರಾದ ಹೆಚ್. ಶಿವಾನಂದಪ್ಪ, ಬಾತಿ ಚಂದ್ರಶೇಖರ್, ಕಾರ್ಯದರ್ಶಿ ಪ್ರವೀಣ್ ಜಿ. ಪವಾರ್, ಉಪಾಧ್ಯಕ್ಷ ತುಳಜಪ್ಪ ಭೂತೆ, ಕೆ.ಜಿ. ಕೃಷ್ಣ, ರೂಪಾ ಕಾಟ್ವೆ, ಆನಂದ್ ಕುಮಾರ್, ಹಟ್ಟಿ ನಾಯಕ ಬಾಬು ರಾಥೋಡ್, ಮೂರ್ತಿ ನಾಯ್ಕ, ಪಿ. ರಾಜನಾಯ್ಕ., ಶಂಕರ್ ನಾಯ್ಕ, ಕೋಟ್ಯನಾಯ್ಕ, ಹನುಮಂತನಾಯ್ಕ, ಹಿರಸಾ ಹಂಸಾಗರ್, ಸಂತೋಷ್ ಎನ್. ಖಿರೋಜಿ, ಪುರಿ ಸುರೇಶ್ ನಾಯ್ಕ, ಪ್ರವೀಣ್ ಇನ್ನಿತರರಿದ್ದರು.

# ಯಾವುದೇ ಕಾಯಿಲೆ ಬಂದರೂ ನಿರ್ಲಕ್ಷ್ಯ ಬೇಡ

## ಮಲೇಬೆನ್ನೂರು : ಮಲೇರಿಯಾ ವಿರೋಧಿ ಮಾಸಾಚರಣೆಯಲ್ಲಿ ಟಿಹೆಚ್‌ಓ ಡಾ.ಚಂದ್ರಮೋಹನ್ ಮನವಿ

ಮಲೇಬೆನ್ನೂರು, ಜೂ.25- ಕೋವಿಡ್ 3ನೇ ಅಲೆ ಬರುವ ಸಾಧ್ಯತೆ ಇದ್ದು, 2ನೇ ಅಲೆ ಕಡಿಮೆ ಆಗಿದೆ ಎಂದು ಯಾರೂ ಮೈ ಮರೆಯದೇ ಸದಾ ಎಚ್ಚರದಿಂದಿರಬೇಕೆಂದು ಹರಿಹರ ತಾಲ್ಲೂಕು ಟಿಹೆಚ್‌ಓ ಡಾ.ಚಂದ್ರಮೋಹನ್ ಮನವಿ ಮಾಡಿದ್ದಾರೆ.

ಅವರು ಶುಕ್ರವಾರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಮಲೇರಿಯಾ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಲಸಿಕೆ ಹಾಕಿಸಿಕೊಂಡವರೂ ಜಾಗೃತರಾಗಿರಬೇಕು. ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ನಿಗಾ ವಹಿಸಿ ಎಂದ ಅವರು, ಮಳೆಗಾಲ ಆರಂಭವಾಗಿರುವುದರಿಂದ ಸೊಳ್ಳೆಗಳು ಉತ್ಪತ್ತಿಯಾಗಿ ಅವು ಕಚ್ಚುವುದರಿಂದ ಮಲೇರಿಯಾ ದಂತಹ ರೋಗಗಳು ಹರಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಮನೆಯ ಸುತ್ತಮುತ್ತಲಿನ ಜಾಗದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಿ. ಸಂಜೆ ವೇಳೆ ಮನೆಯ ಬಾಗಿಲು ಸೇರಿದಂತೆ ಎಲ್ಲಾ ಕಿಟಕಿಗಳನ್ನು ಮುಚ್ಚಿ, ಸೊಳ್ಳೆಗಳು ಒಳಗಡೆ ಬರದಂತೆ ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಉಪತಹಶೀಲ್ದಾರ್ ಆರ್.ರವಿ ಮಾತನಾಡಿ, ಸ್ವಚ್ಛತೆಗೆ ಒತ್ತುಕೊಟ್ಟಾಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಎಂದರು.



### ಮಲೇಬೆನ್ನೂರಿನಲ್ಲಿ ಕಳೆದ 5 ವರ್ಷಗಳಿಂದ ಒಂದೂ ಮಲೇರಿಯಾ ಕೇಸಿಲ್ಲ : ಡಾ.ಲಕ್ಷ್ಮಿದೇವಿ

ಪುರಸಭೆ ಮುಖ್ಯಾಧಿಕಾರಿ ದಿನಕರ್ ಮಾತನಾಡಿ, ಪಟ್ಟಣದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿದ್ದು, ಸೊಳ್ಳೆಗಳು ಉತ್ಪತ್ತಿಯಾಗದಂತೆ ಔಷಧಿ ಸಿಂಪರಣೆ ಮಾಡಲಾಗುವುದು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ ಮಾತನಾಡಿ, ನಮ್ಮ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಿಂದ ಒಂದೂ ಮಲೇರಿಯಾ ಕೇಸ್ ಪತ್ತೆಯಾಗಿಲ್ಲ. ಕಾಯಿಲೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿರುವುದು ಸಮಾಧಾನ ತಂದಿದೆ ಎಂದರು.

ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಎಂ.ವಿ. ಹೊರಕೇರಿ, ಪತ್ರಕರ್ತರಾದ ನಟರಾಜ್, ಸದಾನಂದ್, ದೇವರಾಜ್ ಮಾತನಾಡಿದರು.

ವೈದ್ಯರಾದ ಡಾ.ಸುಭಾಷ್, ಡಾ.ಅರ್ಪಿತಾ, ಪರಿಸರ ಇಂಜಿನಿಯರ್ ಉಮೇಶ್, ಪತ್ರಕರ್ತರಾದ ಜಿಗಳಿ ಪ್ರಕಾಶ್, ವಾಸವಿ ರಮೇಶ್, ಕುಂಬಳೂರು ವಾಸು, ಹೊಸಳ್ಳಿ ಕರಿಬಸಪ್ಪ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಆಶಾ ಕಾರ್ಯಕರ್ತೆ ಗಂಗಮ್ಮ ಪ್ರಾರ್ಥಿಸಿದರು. ತಾ.ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಸ್ವಾಗತಿಸಿದರು. ಆರೋಗ್ಯ ಕೇಂದ್ರದ ಕಿರಣ್ ವಂದಿಸಿದರು.

## ಗುತ್ತೂರಿನಲ್ಲಿ ಹಾವು ಕಚ್ಚಿ ಕಾರ್ಮಿಕನ ಸಾವು : ಶಾಸಕರಿಂದ ಸಾಂತ್ವನ



ಹರಿಹರ, ಜೂ.25- ಗುತ್ತೂರಿನ ಎಲ್ಲಮ್ಮ ನಗರದಲ್ಲಿ ಕಟ್ಟಡ ಕಾರ್ಮಿಕನೋರ್ವ ಮನೆ ದುರಸ್ತಿ ಕಾರ್ಯದಲ್ಲಿ ತೊಡಗಿದ್ದಾಗ ಹಾವು ಕಚ್ಚಿ ಸಾವಿಗೀಡಾಗಿರುವ ಘಟನೆ ನಡೆದಿದೆ. ಗುತ್ತೂರಿನ ಪ್ರಭು (35) ತಂದೆ ಮಹಾಂತೇಶಪ್ಪ ಸಾವಿಗೀಡಾಗಿರುವ ದುರ್ದೈವಿ. ಶಾಸಕ ಎಸ್. ರಾಮಪ್ಪ ಪ್ರಭು ಮನೆಗೆ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಈ ವೇಳೆ ಮಾತನಾಡಿದ ಶಾಸಕರು, ಮೃತ ವ್ಯಕ್ತಿಯ ಮನೆಯ ಪಕ್ಕದಲ್ಲಿ ಸಿದ್ದಪ್ಪ ಎಂಬಾತ ತನ್ನ ಜಮೀನಿನಲ್ಲಿ ಕಳೆದ ಹಲವಾರು ವರ್ಷಗಳಿಂದ ನೂರಾರು ಟ್ರಿಪ್ ಮರಳನ್ನು ಶೇಖರಣೆ ಮಾಡಿದ್ದು, ಇಲ್ಲಿ ಹಾವುಗಳ ಓಡಾಟ ಹೆಚ್ಚಾಗಿದೆ. ಪ್ರಭು ಮರಣಕ್ಕೆ ಸಿದ್ದಪ್ಪನವರ ನಿರ್ಲಕ್ಷ್ಯವೇ ಕಾರಣವಾಗಿದ್ದು, ಅವರು ಸ್ಥಳಕ್ಕೆ ಆಗಮಿಸಿ, ಮೃತರ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರಭುವಿಗೆ ಪತ್ನಿ, ಮೂವರು ಹೆಣ್ಣು ಮಕ್ಕಳಿದ್ದಾರೆ. ಸ್ಥಳಕ್ಕೆ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಸೈಫುದ್ದೀನ್ ಸಾಬ್, ನಗರಸಭೆ ಪೌರಾಯುಕ್ತರಾದ ಎಸ್. ಲಕ್ಷ್ಮೀ, ಎಇಇ ಬಿರಾದಾರ್, ಗ್ರೇಡ್ 2 ತಹಶೀಲ್ದಾರ್ ಶಶಿಧರ್, ವಿ.ಎ. ಪ್ರಭು ಆಗಮಿಸಿ, ಪರಿಶೀಲನೆ ನಡೆಸಿದರು.

## ಶಾಮನೂರು: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಇಂಗ್ಲಿಷ್ ಮಾಧ್ಯಮ ಮಂಜೂರು

ದಾವಣಗೆರೆ, ಜೂ.25- ಶಾಮನೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1 ಮತ್ತು 2ನೇ ತರಗತಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸಲು ಮತ್ತು ದಾಖಲು ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ. ಮಕ್ಕಳು ಸದುಪಯೋಗ ಪಡೆಯಲು ಬಡ್ತಿ ಮುಖ್ಯೋಪಾಧ್ಯಾಯರು ಕೋರಿದ್ದಾರೆ.


**ROOM FOR RENT**
Room with All facilities @ Vidyanagar First Bus Stop.
Contact : 63615 93954

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಚಪಾತಿ, ಪೂರಿ ಮಾಡಲು ಮಹಿಳೆ ಹಾಗೂ ಪಾನಿಪೂರಿ ಮಾಡಲು ಪುರುಷ ಬೇಕಾಗಿದ್ದಾರೆ.
ಅನುಭವವಿದ್ದವರು ಸಂಪರ್ಕಿಸಿ : 90601 72745

**MCC & P.J Extn ನಲ್ಲಿ ಸೈಟ್ ಮಾರಾಟಕ್ಕಿವೆ**
P.J. Extn - 60x80, 20x70 -ಸೈಟ್
MCC A & B - 44x60, 35x50 ಸೈಟ್, ಮನೆ, ಸಿದ್ದವೀರಪ್ಪ, ಆಂಜನೇಯ - ಸೈಟ್, ಮನೆ ಡಾಲರ್ಸ್ & ಶಿವ ಪಾರ್ವತಿ -ಸೈಟ್, ಹೊಲಗಳ ಮಾರಾಟಕ್ಕೆ, ಖರೀದಿಗೆ ವಿಚಾರಿಸಿ
7676857676 ವೀರೇಶ್

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 98440-63409

**ಮನೆಗಳು ಲೀಜಿಗೆ ಇವೆ**
ವಿದ್ಯಾನಗರ, ತರಳಬಾಳು ಬಡಾವಣೆಯಲ್ಲಿ 2 ಬೆಡ್‌ರೂಂ ಕೆಳಗಿನ ಹೊಸ ಮನೆ, 2 ಬೆಡ್ ರೂಂ ಮೊದಲನೇ ಮಹಡಿಯಲ್ಲಿ.
ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್.'ಎ' ಬ್ಲಾಕ್, ಪೂರ್ವ 30x46 ಡೂಪ್ಲೆಕ್ಸ್, ಪಶ್ಚಿಮ ಸೈಟು ಉತ್ತರ ಬಾಗಿಲು 30x50 ಕೆಳಗೆ ಮನೆ ಮೇಲೆ 2 ಮನೆ ಮತ್ತು ಮೇಲೆ ರೂಂ, ವಿನಾಯಕ ಬಡಾವಣೆ ಪೂರ್ವ 40x60, ಉತ್ತರ 30x40ಕೆಳಗೆ ಮನೆ ಮೇಲೆ 2 ರೂಂ
ಐಗೂರು ವಿಜಯ್‌ಕುಮಾರ್
9945702495

**ಸೈಟ್ ಮಾರಾಟಕ್ಕೆ**
1) J. H. ಪಟೇಲ್ 40x60, 30x55 ಪೂರ್ವ.
2) Dollars Colony 40x59 ಉತ್ತರ.
3) K.H.B. 40x60 ಪೂರ್ವ 30x40 ಉತ್ತರ.
KB : 98440-63409, 97315-63409

**ಬೇಕಾಗಿದ್ದಾರೆ**
ಎಂ.ಸಿ.ಸಿ.'ಬಿ' ಬ್ಲಾಕ್‌ನಲ್ಲಿರುವ ಕಣ್ಣಿನ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಆಯಾ (9 am - 5.30 pm) ಬೇಕಾಗಿದ್ದಾರೆ.
98807 08289

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್.'ಬಿ' ಬ್ಲಾಕ್, 30x40 ಪೂರ್ವ (5 TV Units) ಬಸವೇಶ್ವರ ಲೇಔಟ್ ಪೂರ್ವ 30x40 ಕೆಳಗೆ ಮೇಲೆ ಮನೆ ಮತ್ತು ಮೇಲೆ ರೂಂ, ಉತ್ತರ 30x40, ಪಶ್ಚಿಮ, 30x46 ಉತ್ತರ 30x40 ಡೂಪ್ಲೆಕ್ಸ್. ಸಂಪರ್ಕಿಸಿ
ಐಗೂರು ವಿಜಯ್‌ಕುಮಾರ್
9945702495

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ, ಅನ್ನ ದಾಸೋಹದ ದಾನಿಗಳು
ಎಂ.ಎಂ. ಪ್ರಸನ್ನ
Development officer, LIC, DAVANAGERE
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ವಿಕಾಸ ತರಂಗಿಣಿ
ದಾವಣಗೆರೆ ಇವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ 40x60, 30x50, 30x40, ಪಶ್ಚಿಮ 38 1/2x40, ಎಸ್.ಎಸ್. 'ಬಿ' ಬ್ಲಾಕ್ ಉತ್ತರ 30x43, 40x60, ಕುವೆಂಪು ಬಡಾವಣೆ ಪೂರ್ವ 40x60, ಪಶ್ಚಿಮ 40x60 (ಅಕ್ಕ-ಪಕ್ಕ) ಸಂಪರ್ಕಿಸಿ
ಐಗೂರು ವಿಜಯ್‌ಕುಮಾರ್
9945702495

**ಉತ್ತಮ ಗುಣಮಟ್ಟದ**
ಎಂ.ಸ್ಯಾಂಡ್, 20.MM ಡಸ್ಟ್ ಮಿಕ್ಸ್ ಗ್ರಾವೆಲ್‌ಗಾಗಿ
ಸಂಪರ್ಕಿಸಿ
98451 95627

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ, 4ನೇ ಮೇನ್, 3ನೇ ಕ್ರಾಸ್, ಮೊದಲನೇ ಮಹಡಿಯಲ್ಲಿ 2 BHK ಕಾರ್ನರ್ ಮನೆ ಬಾಡಿಗೆಗೆ ಇದೆ.
ಮೊ. : 94814 52642

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ 30x50 ಉತ್ತರ, 30x50 ಪಶ್ಚಿಮ, ಶಿವ ಪಾರ್ವತಿ ಬಡಾವಣೆಯಲ್ಲಿ 30x50 ಪೂರ್ವ, 30x50 ಪಶ್ಚಿಮ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40x60 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
ಮಹಾಲಸ ನಿಲಯ 4ನೇ ಮೇನ್, 4ನೇ ಕ್ರಾಸ್, ವಿನೋಬನಗರ
Contact: 94488 73541
ಸುಬ್ಬರಾವ್ ವೆರ್ಣೇಕರ್
72598 76703

**OLD AGE HOME**
Safety and Hygiene, 24 Hours Doctor & Specialist consultation Permanent bedside Nursing, Physiotherapy, 24 Hours Ambulance, TV DTH Wifi, Special Diet Menu
CONTACT: 9071106106

**Wanted ITI (Fitter)**
Freshers for a manufacturing unit situated in Davangere Industrial area
Walk in interview at
Sri Sai International Hotel
on 29 Tuesday from 11.30 am to 1.30 pm
Vacant post 20 man Power
99026 97197, 95356 25353

**ಬೇಕಾಗಿದ್ದಾರೆ**
ಡ್ಯೂಟಿ ಡಾಕ್ಟರ್, ನರ್ಸ್‌ಗಳು, ಆಯಾ
ಸಂಪರ್ಕಿಸಿ
96869 99260

**ಬೇಕಾಗಿದ್ದಾರೆ**
ಕ್ಯಾಷಿಯರ್-1, ಸೇಲ್ಸ್ ಗರ್ಲ್ಸ್ - 5, ಸೇಲ್ಸ್ ಬಾಯ್ಸ್ -5 ಕ್ಲೀನಿಂಗ್-1
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ.

**ಹೊಂಬಾಳ್ ಇ-ಮಾರ್ಟ್**
ಬಾಕಿ ಉಳಿದಿರುವ ಒಂದು ಮಾರ್ಟನ್ನು ತೆರೆಯಲು ಕೇವಲ ಒಬ್ಬರು ಹೂಡಿಕೆದಾರರು ಬೇಕಾಗಿದ್ದಾರೆ. ಕನಿಷ್ಠ 3% ನಿರ್ದಿಷ್ಟ ಆದಾಯದ ಜೊತೆಗೆ 50% ಲಾಭವನ್ನು ಕೊಡಲಾಗುವುದು. ಆಸಕ್ತರು ಕರೆ ಮಾಡಿ ಚರ್ಚಿಸಿ
9008985112

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**SHARP**
CALL FOR INTERVIEW
Field Service Engg required for Photocopies Machines
ITI/Diploma, Ele.
Two Wheeler Vehicle Compalsory
Gaurav Communications, Davangere.
93799 06688, 10 am - 7.00 pm

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
Two wheeler ಬೈಕ್ ಇರಬೇಕು.
ಪೆಟ್ರೋಲ್ ಭತ್ಯೆ ಕೊಡಲಾಗುವುದು.
Call : 9480795548, 9880042597
Whatsapp No: 70199 83025 (Resume)

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ**
ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ
ಫೋನ್ ನಂ:
74118 62216

**ಮನೆ ಬಾಡಿಗೆಗೆ ಇದೆ**
ದೇವರಾಜ್ ಅರಸು ಬಡಾವಣೆ 'ಸಿ' ಬ್ಲಾಕ್, 1ನೇ ಕ್ರಾಸ್ ಮೈಲಾರಲಿಂಗೇಶ್ವರ ದೇವಸ್ಥಾನದ ಹತ್ತಿರ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ (ಎರಡನೇ ಮಹಡಿ) ನಲ್ಲಿ ನೀರು ಮತ್ತು ಬೋರ್‌ವೆಲ್ ನೀರಿನ ವ್ಯವಸ್ಥೆ ಇದೆ. ವಿಚಾರಿಸಿ
9845840604
9980532781

**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357


**ಕೆಲಸಕ್ಕೆ ಬೇಕಾಗಿದ್ದಾರೆ**
ಮನೆಯಲ್ಲಿ ಇದ್ದುಕೊಂಡು ವಯೋವೃದ್ಧರನ್ನು ನೋಡಿಕೊಳ್ಳಲು ಹಾಗೂ ಅಡುಗೆ ಕೆಲಸ ಮಾಡಲು ಹೆಣ್ಣು ಮಕ್ಕಳು (ಯುವತಿಯರು, ವಿಧವೆಯರು) ಬೇಕಾಗಿದ್ದಾರೆ.
ಸಂಪರ್ಕಿಸಿ :
91486 83185

**ಬೇಕಾಗಿದ್ದಾರೆ**
1) ಕಾಲ್‌ಸೆಂಟರ್-ಗರ್ಲ್ಸ್
2) ಡೆಲಿವರಿ-ಬಾಯ್ಸ್ (ಸೈಕಲ್ ಇದ್ದವರಿಗೆ ಆದ್ಯತೆ)
3) ಸೇಲ್ಸ್ ಬಾಯ್ಸ್-ಕಾಂಟ್ರ್ಯಾಕ್ಟ್
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮಾ
1ನೇ ಮಹಡಿ, ಕಾಲೇಜ್ ರೋಡ್, ಪಿ.ಜೆ. ಬಡಾವಣೆ
ಡಾ॥ ಆಲೂರು ಮಂಜುನಾಥ್ ಹಾಸ್ಪಿಟಲ್ ಪಕ್ಕ, ದಾವಣಗೆರೆ.
95132 22192

**ನಾಟಿ ಕೋಳಿಗಳು**
(Wholesale ದರದಲ್ಲಿ) ಮಾರಾಟಕ್ಕಿವೆ
90082 03418
63645 96567

**ಅಂಕಪಟ್ಟಿ ಕಳೆದಿದೆ**
ಮೇಘನ ಎನ್.ಎಸ್. ಬಿನ್ ಶಿವಕುಮಾರ್ ಒಡೆಯರ್, ಬಿಳಿಚೋಡು ಗ್ರಾಮ, ಜಗಳೂರು ತಾಲ್ಲೂಕು ನಿವಾಸಿ, ನನ್ನ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಮನೆ ಸ್ವಚ್ಛ ಮಾಡುವಾಗ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕರೆ ತಲುಪಿಸಲು ಕೋರುತ್ತೇನೆ.
ಮೇಘನ ಎನ್.ಎಸ್
ಮೊ: 98806 22932


## 14ನೇ ವರ್ಷದ ಪುಣ್ಯಸ್ಮರಣೆ



**ದಿ॥ ಷಣ್ಮುಖ ಬಿರಾದಾರ**

ಸಾವಿರಾರು ಕನಸುಗಳು ಸಾಕಾರವಾಗುವ ಮೊದಲೇ ಶಿವ ಸಾನ್ನಿಧ್ಯವನ್ನು ಸೇರಿದ ನೀನು ನಮ್ಮೆಲ್ಲರ ಮನಸ್ಸಿನಲ್ಲಿ ಸದಾ ನೆಲೆಸಿರುವೆ. ನಿನ್ನ ಅಗಲಿಕೆಯ ನೋವಿನಲ್ಲೇ ದಿನ ಕಳೆಯುತ್ತಿರುವ...

ತಾಯಿ : ನೀಲಮ್ಮ ಬಿರಾದಾರ, ದಾವಣಗೆರೆ.
ಸಹೋದರರು, ಸಹೋದರಿಯರು, ಅತ್ತೆ-ಮಾವಂದಿರು, ಅಳಿಯಂದಿರು ಮತ್ತು ಅಪಾರ ಬಂಧು-ಮಿತ್ರರು.


**WANTED**
Sales Executive
Any Qualification, 2 years experience and Freshers also.
Sri Lakshmi Venkateshwara Granites & Marbles
# 2002/1 to 2002/7, Taralabalu Extn., Hadadi Main Road, Davangere-577004.
E-mail : slvgmdvg2010@gmail.com
Mob : 90086-60111

**ಬೇಕಾಗಿದ್ದಾರೆ**
ವಾಟರ್ (Water) 20 ltr Can ಡೆಲಿವರಿ ಕೊಡಲು ಹುಡುಗರು ಬೇಕಾಗಿದ್ದಾರೆ.
80956 52555

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ
ಅನುಭವ ಇದ್ದವರಿಗೆ ಆದ್ಯತೆ.
ವೃಷಭ ಮೆಡಿಕಲ್ಸ್
2ನೇ ಮೇನ್ ರೋಡ್, ಜಾಲಿನಗರ
99805 32781


## ಅಬ್ದುಲ್ ಬಷೀರ್‌ಸಾಬ್ ನಿಧನ



ದಾವಣಗೆರೆ ಮಹಬೂಬ್ ನಗರ 4ನೇ ಕ್ರಾಸ್ ವಾಸಿ **ಅಬ್ದುಲ್ ಬಷೀರ್ ಸಾಬ್** ಅವರು ದಿನಾಂಕ 25.06.2021ರ ಶುಕ್ರವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.06.2021ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಎಸ್.ಎಸ್.ಎಂ. ಕ್ವಾಟ್ರರ್ಸ್, ಅಲ್‌ಇಖ್ರಾ ಶಾಲೆ ಹತ್ತಿರವಿರುವ ಹೊಸ ಖಬರಸ್ತಾನದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ
ಮೊ. : 91642 13989, 94482 17238

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 26.06.2021 ರಂದು ನಿಧನರಾದ ಮಧು ಟ್ರಾನ್ಸ್‌ಪೋರ್ಟ್ ಮಾಲೀಕರಾದ

**ಶ್ರೀ ಎಂ.ಕೆ. ರಾಜಶೇಖರಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

✦ ಕೋರಿ ಹಿರಿಯಣ್ಣ, ಅಕ್ಕಿ ವ್ಯಾಪಾರಸ್ಥರು,
✦ ಕೋರಿ ಸಿದ್ದೇಶ್ ✦ ಕೋರಿ ಶಿವಕುಮಾರ್
✦ ಕೆ.ಎಂ. ಸತೀಶ್ ಬಾಬು ✦ ಎಂ.ಡಿ. ದೊಡ್ಡಪ್ಪ
✦ ಕಿರಾಣಿ ಅಂಗಡಿ ರಾಜು ✦ ಇಂದೂಧರ


**ಬೇಕಾಗಿದ್ದಾರೆ**
ಎಸ್.ಎನ್. ಎಂಟರ್‌ಪ್ರೈಸಸ್ ವಾಟರ್ ಪ್ಯೂರಿಫೈಯರ್ ಆಫೀಸ್‌ನಲ್ಲಿ ಟೆಲಿ ಮಾರ್ಕೆಟಿಂಗ್ ಮಾಡಲು ಯುವತಿಯರು (ಅವಿವಾಹಿತ) ಸಂಬಳ 7000 ರಿಂದ 8000/- ಹೆಲ್ಪರ್ ಕೆಲಸಕ್ಕಾಗಿ ಯುವಕರು (ಬೈಕ್ ಹೊಂದಿರಬೇಕು) ಸಂಬಳ 9000 ದಿಂದ 10,000/-
ಟೆಲಿ ಮಾರ್ಕೆಟಿಂಗ್: 78992 96668
99642 22603, ಹೆಲ್ಪರ್: 63635 61283

**ಮನೆ ಲೀಸ್/ಬಾಡಿಗೆಗಿದೆ**
#5626/7 "ಜ್ಯೋತಿ ನಿಲಯ" ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ ಡಬಲ್ ಬೆಡ್‌ರೂಂ, ವಾಸ್ತು ಪ್ರಕಾರ ಇದ್ದು, ಗ್ರೌಂಡ್ ಫ್ಲೋರ್ ಮನೆ, ಅಳತೆ 50x30 ಶುದ್ಧ ಸಸ್ಯಹಾರಿಗಳಿಗೆ ಮಾತ್ರ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಶ್ರೀ ರಾಘವೇಂದ್ರ ನರ್ಸಿಂಗ್ ಕಾಲೇಜ್ ಹತ್ತಿರ ಇಂಜಿನಿಯರ್ ಅಸೋಸಿಯೇಷನ್ ಬಿಲ್ಡಿಂಗ್.
93410 04279 ಸುರೇಶ್ ಕುಮಾರ್ ಎ.ಎಸ್
97417 40929 ರಾಮಕೃಷ್ಣ ಎ.ಎಸ್

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**Room For Rent**
Single Room attached bath room 14x14 ft, 2nd floor, 4th Main, 9th cross, P.J. Extenstion Davanagere
94489 29509

**ಮಹಡಿ ಮನೆ ಬಾಡಿಗೆ**
ನಗರದ ಕೆ.ಬಿ. ಬಡಾವಣೆ ಬಳ್ಳಾರಿ ಸಿದ್ದಮ್ಮ ಪಾರ್ಕ್ ಹತ್ತಿರ, ಸಿಂಗಲ್ ಫ್ಯಾಮಿಲಿಗೆ ಮನೆ ಬಾಡಿಗೆಗೆ ಇದೆ
ವಿಚಾರಿಸಿ :
ಸಸ್ಯಾಹಾರಿಗಳಿಗೆ ಮಾತ್ರ
98443 19064

**ಮನೆ ಲೀಸ್‌ಗಿದೆ**
ಎಂ.ಬಿ.ಎ ಕಾಲೇಜ್ ರಸ್ತೆಯಲ್ಲಿ 2 BHK ಮನೆ ಲೀಸ್‌ಗಿದೆ
ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಕರ್ಯವಿದೆ. ಸಂಪರ್ಕಿಸಿ
ಸ್ವಾಮಿ: 99807 28533

**ಮನೆ ಬಾಡಿಗೆಗೆ ಇದೆ**
3BHK ನೆಲ ಮಹಡಿ ಮನೆ ಬಾಡಿಗೆಗಿದೆ.
ಸಿದ್ದವೀರಪ್ಪ ಬಡಾವಣೆ, 12ನೇ ಕ್ರಾಸ್, 8ನೇ ಮೇನ್ ಎದುರುಗಡೆ.
ಸಸ್ಯಹಾರಿಗಳಿಗೆ ಮಾತ್ರ.
99645 82202
9844092031

**WANTED**
1. Account Assistant - 01 no's (B.Com - Tally)
2. Sales Executive - 01 no's (Any Degree).
Male Candidates only.
Cotmac Industrial Trading Pvt Ltd. Davangere.
Contact : 98800 19842/11

**ತಕ್ಷಣ ಬೇಕಾಗಿದ್ದಾರೆ**
Tally billing Experince ಇರುವ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸಿ
99644 65566

**ಖಾಲಿ ಜಾಗ ಬಾಡಿಗೆಗೆ ಇದೆ**
ಪಿ.ಬಿ ರೋಡಿನಲ್ಲಿ ಉತ್ತರ ದಿಕ್ಕಿನ ಹೊಸದಾಗಿ ಕಾಂಪೌಂಡ್ ಕಟ್ಟಿಸಿ ಗೇಟ್ ಹಾಕಿರುವ ಖಾಲಿ ಜಾಗ ಬಾಡಿಗೆಗೆ ದೊರೆಯುತ್ತದೆ. ಅಳತೆ 50x150, ಫೋರ್ಡ್ ಶೋ ರೂಂ ಪಕ್ಕ
ಸಂಪರ್ಕಿಸಿ
94482 02879
99726 61122

# ಆರ್ಕೆಸ್ಟ್ರಾ ಕಲಾವಿದರಿಗೆ ಬಿಸ್ಕತ್ತು ವಿತರಣೆ



ದಾವಣಗೆರೆ, ಜೂ.25- ಎಸ್‌ಆರ್‌ಬಿ ವೆಲ್‌ಫೇರ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಶ್ರೀನಿವಾಸ ಕಮ್ಮತ್ತಹಳ್ಳಿ ಹಾಗೂ ಶ್ರೀ ನಂದಿ ಗ್ರೂಪ್‌ನ ಸಹಭಾಗಿತ್ವದಲ್ಲಿ ಬಡ ಆರ್ಕೆಸ್ಟ್ರಾ ಕಲಾವಿದರಿಗೆ ಬಿಸ್ಕತ್ತುಗಳನ್ನು ಇಂದು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ನಂದಿ ಗ್ರೂಪ್‌ನ ಅಧ್ಯಕ್ಷ ಚಂದ್ರಶೇಖರ್ ನಾಯ್ಕ್, ಪ್ರಧಾನ ಕಾರ್ಯದರ್ಶಿ ಪಿ.ಬಸವರಾಜ್, ಗೌರವಾಧ್ಯಕ್ಷ ದೇವೇಂದ್ರಪ್ಪ, ಉಪಾಧ್ಯಕ್ಷ ಸುರೇಶ್ ಹುಲ್ಲುಮನೆ, ಶ್ರೀ ನಂದಿ ಗ್ರೂಪ್‌ನ ಸದಸ್ಯ ಪರಮೇಶಪ್ಪ, ಮಲ್ಲಿಕಾರ್ಜುನ್, ವಿರುಪಾಕ್ಷಿ, ಶಶಿಕುಮಾರ್ ಮತ್ತಿತರರು ಭಾಗವಹಿಸಿದ್ದರು.

# ಕೂಲಿ ಕಾರ್ಮಿಕರಿಗೆ ಆಹಾರ ಧಾನ್ಯದ ಕಿಟ್



ದಾವಣಗೆರೆ, ಜೂ.25- ಕೋವಿಡ್‌ನಿಂದ ಸಂಕಷ್ಟಕ್ಕೊಳಗಾಗಿರುವ ಎಪಿಎಂಸಿ ಕೂಲಿಕಾರರಿಗೆ ನಗರದ ಸಾಮಾಜಿಕ ಸೇವಾ ಕಾರ್ಯಕರ್ತರಾದ ಶ್ರೀಮತಿ ಸುಮ ರಾಯ್ಕರ್ ಅವರು ನೀಡಿದ ಆಹಾರ ಧಾನ್ಯದ ಕಿಟ್‌ಗಳನ್ನು ಶ್ರೀ ಶಿವಮೂರ್ತಿ ಮುರುಘಾ ಶರಣರು ವಿತರಿಸಿದರು. ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ, ಸಂಸದ ಜಿ.ಎಂ.ಸಿದ್ದೇಶ್ವರ, ನಾಗರಾಜ್ ಲೋಕಿಕೆರೆ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಉಪ್ಪು ನೀರನ್ನೇ ಲಸಿಕೆ ಎಂದು ವಂಚನೆ

**(1ನೇ ಪುಟದಿಂದ)** ಲಸಿಕಾ ಶಿಬಿರದ ಹೆಸರಿನಲ್ಲಿ ಇವರು 12.40 ಲಕ್ಷ ರೂ. ವಸೂಲಿ ಮಾಡಿದ್ದರು ಎಂದು ಆರೋಪಿಸಲಾಗಿದೆ. ಇವರು ನೀಡಿದ ಲಸಿಕೆಯಲ್ಲಿ ಉಪ್ಪು ನೀರು ಇದ್ದದ್ದು ಮೇಲ್ನೋಟಕ್ಕೆ ಕಂಡು ಬಂದಿದೆ. ಆರೋಪಿಗಳ ವಿರುದ್ಧ 308 ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

# ಪತ್ರಿಕಾ ವಿತರಕರಿಗೆ ಕೋವಿಡ್ ಲಸಿಕೆ



ದಾವಣಗೆರೆ, ಜೂ.25- ನಗರದ ಪತ್ರಿಕಾ ವಿತರಕರಿಗೆ ವರದಿಗಾರರ ಕೂಟದ ಕಚೇರಿಯಲ್ಲಿ ಕೋವಿಡ್ ಲಸಿಕೆ ಹಾಕಲಾಯಿತು. ನಿತ್ಯ ಮನೆ ಮನೆಗೆ ತೆರಳಿ ಓದುಗರಿಗೆ ಪತ್ರಿಕೆ ತಲುಪಿಸುವ ವಿತರಕರ ಆರೋಗ್ಯ ರಕ್ಷಣೆಯ ನಿಟ್ಟಿನಲ್ಲಿ ಲಸಿಕೆ ನೀಡಲು ವ್ಯವಸ್ಥೆ ಮಾಡಲಾಗಿತ್ತು.

ಸಂಸದ ಜಿ.ಎಂ.ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಲಸಿಕಾ ಕಾರ್ಯಕ್ಕೆ ಚಾಲನೆ ನೀಡಿದರು. ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್.ಆರಾಧ್ಯ, ಪ್ರಧಾನ ಕಾರ್ಯದರ್ಶಿ ಮಂಜುನಾಥ ಕಾಡಜ್ಜಿ, ಹಿರಿಯ ಪತ್ರಿಕಾ ವಿತರಕ ಎ.ಎನ್. ಕೃಷ್ಣಮೂರ್ತಿ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜೈನ್ ಲೇಔಟ್‌ನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ ಜೂ.25- ವಿಶ್ವ ಪರಿಸರ ದಿನಾಚರಣೆಯನ್ನು ನಗರದ ಜೈನ್ ಲೇಔಟ್ ನಿವಾಸಿಗಳಿಂದ ಮತ್ತು ಮಕ್ಕಳಿಂದ ಆಚರಿಸಲಾಯಿತು. ಶ್ರೀಮತಿ ಶಶಿಕಲಾ ಬಡದಾಳ್ ಅವರು ಮಕ್ಕಳಿಗೆ ಗಿಡಗಳನ್ನು ಕೊಟ್ಟು ಮನೆಯ ಮುಂದೆ ಗಿಡ ನೆಡಲು ಹೇಳಿ ಮಕ್ಕಳಿಂದಲೇ ಗಿಡವನ್ನು ನೆಡೆಸಲಾಯಿತು.

# ಆಶಾದೀಪ ಜನಸೇವಾ ಟ್ರಸ್ಟ್‌ನಿಂದ ಕಿಟ್



ದಾವಣಗೆರೆ ಜೂ.25- ನಗರದ ಆಶಾದೀಪ ಜನಸೇವಾ ಟ್ರಸ್ಟ್‌ನಿಂದ ಶಿವಕುಮಾರ ಸ್ವಾಮಿ ಬಡಾವಣೆಯ ಪೌರ ಕಾರ್ಮಿಕರು, ಕೂಲಿ ಕಾರ್ಮಿಕರು, ಬಡ ಕುಟುಂಬಕ್ಕೆ ದಿನಸಿ ಕಿಟ್ ಗಳನ್ನು ವಿತರಿಸಲಾಯಿತು. ಭಾರತೀಯ ಜೀವ ವಿಮಾ ನಿಗಮದ ಪ್ರತಿನಿಧಿ ಚಂದ್ರಯ್ಯ, ಸರ್ವಮಂಗಳ, ವಿಶಾಲ್, ವಿನಯ್, ಆಶಾ ಮತ್ತಿತರರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಓದುಗರ ಪತ್ರ

### ಕೊರೊನಾ : ಹೆಚ್ಚುವರಿ ಬಸ್ ಬಿಡಲಿ



**ಮಾನ್ಯರೇ,**

ಪ್ರಸ್ತುತ ಅನ್‌ಲಾಕ್ ಒಂದರ ಅಡಿಯಲ್ಲಿ ಕೆಲವೇ ಕೆಲವು ಸಾರಿಗೆ ಬಸ್ ಗಳನ್ನು ಬಿಟ್ಟಿದ್ದು, ಪ್ರಯಾಣಿಕರ ಸಂಖ್ಯೆಯು ಹೆಚ್ಚಾಗಿರುವುದರಿಂದ ಬಸ್ ಗಳಲ್ಲಿ ಸಾಮಾಜಿಕ ಅಂತರದ ಪರಿಪಾಲನೆಯಾಗುತ್ತಿಲ್ಲ. ಕೊರೊನಾದ ಕರಿನೆರಳು ಇನ್ನೂ ಪೂರ್ತಿ ಕಡಿಮೆಯಾಗಿಲ್ಲದ ಈ ಸಮಯದಲ್ಲಿ ತುಂಬಿದ ಪ್ರಯಾಣಿಕರಿಂದ ಕೂಡಿದ ಬಸ್ ಗಳು ಕೊರೊನಾದ ಸಾಗಾಣಿಕೆಗೆ ರಹದಾರಿಗಳಾಗುತ್ತವೆ. ಆದ್ದರಿಂದ ಆದಷ್ಟು ಬೇಗ ಹೆಚ್ಚಿನ ಸಂಖ್ಯೆಯ ಬಸ್ ಗಳನ್ನು ಬಿಟ್ಟಲ್ಲಿ ಸಮಸ್ಯೆ ಪರಿಹಾರವಾಗುತ್ತದೆ. ಶಾಲಾ ಕರ್ತವ್ಯಕ್ಕೆ ಪ್ರತಿದಿನ ಓಡಾಡುವ ಶಿಕ್ಷಕರ ಜೊತೆಗೆ ಸಾಮಾನ್ಯ ಪ್ರಯಾಣಿಕರೂ ಬಸ್ ಗಳನ್ನು ಅವಲಂಬಿಸಿರುವುದರಿಂದ, ಕೆಲವೇ ಕೆಲವು ಬಸ್‌ಗಳ ಓಡಾಟದಿಂದ ಅನನುಕೂಲವಾಗುತ್ತದೆ. ಸಂಬಂಧಿಸಿದವರು ಈ ಬಗ್ಗೆ ಸೂಕ್ತ ಗಮನ ಹರಿಸಿ ಸಮಸ್ಯೆ ಪರಿಹರಿಸುವರೆಂದು ಆಶಿಸುತ್ತೇವೆ.

- **ಮಂಜುಳಾ ಪ್ರಸಾದ್**, ದಾವಣಗೆರೆ.

# ಜನರ ಸಹಾಯಕ್ಕೆ ಬರುವುದು ಸಮಾಜದ ನೈತಿಕ ಜವಾಬ್ದಾರಿ



ಸ್ಲಂ ಜನಾಂದೋಲನ ಕರ್ನಾಟಕ ಸಮಿತಿ, ಸಾವಿತ್ರಿ ಬಾಪುಲೆ ಮಹಿಳಾ ಸಂಘಟನೆಯ ಕಾರ್ಯಕ್ರಮದಲ್ಲಿ ಹಿರಿಯ ನ್ಯಾಯವಾದಿ ಎಲ್.ಹೆಚ್. ಅರುಣ್‌ಕುಮಾರ್

ದಾವಣಗೆರೆ, ಜೂ.25 - ಸಾಂಕ್ರಾಮಿಕ ರೋಗ ಉಲ್ಬಣಗೊಂಡಿರುವ ಇಂದಿನ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರದ ಜೊತೆಗೆ ಸಂಕಷ್ಟಕ್ಕೆ ಒಳಗಾದ ಜನರ ಸಹಾಯಕ್ಕೆ ಬರಬೇಕಾಗಿರುವುದು ಮಾನವೀಯ ಸಮಾಜದ ನೈತಿಕ ಜವಾಬ್ದಾರಿಯೂ ಸಹ ಆಗಿದೆ ಎಂದು ಹಿರಿಯ ನ್ಯಾಯವಾದಿ ಎಲ್. ಹೆಚ್. ಅರುಣ್‌ಕುಮಾರ್ ಪ್ರತಿಪಾದಿಸಿದರು.

ಸ್ಲಂ ಜನಾಂದೋಲನ ಕರ್ನಾಟಕ ಸಮಿತಿ, ಸಾವಿತ್ರಿ ಬಾಪುಲೆ ಮಹಿಳಾ ಸಂಘಟನೆ ದಾವಣಗೆರೆ ಜಿಲ್ಲಾ ಸಮಿತಿ, ಎಪಿಪಿಐ ಸಹಯೋಗದಲ್ಲಿ ನಗರದ ರಾಷ್ಟ್ರೀಯ ಹೆದ್ದಾರಿಯಲ್ಲಿನ ಜಿಲ್ಲಾ ಪಂಚಾಯತಿ ಎದುರಿನ ವಿಮಾನ ಮಟ್ಟಿ ಚಾನಲ್ ಏರಿಯಾದಲ್ಲಿ ಕೋವಿಡ್ ಸಂಕಷ್ಟದಲ್ಲಿನ ಸ್ಲಂ ನಿವಾಸಿಗಳಿಗೆ ದಿನಸಿ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಅಂಕಿ-ಅಂಶಗಳ ಪ್ರಕಾರ ಕೊರೊನಾ ಸೋಂಕಿಗಿಂದ ಹಸಿವಿನಿಂದ ಮರಣ ಹೊಂದುತ್ತಿರುವವರ ಸಂಖ್ಯೆ ಹೆಚ್ಚಾಗಿರುವುದು ಆತಂಕಕಾರಿ ವಿಷಯ ಎಂದು ಅವರು ಹೇಳಿದರು.

ಕೋವಿಡ್‌ನಂತಹ ಸಾಂಕ್ರಾಮಿಕ ರೋಗದಿಂದಾಗಿ ಬಡತನ ಹೆಚ್ಚಾಗಿದ್ದು, ದುಡಿಯುವ ಕೈಗಳಿಗೆ ಕೆಲಸ ಇಲ್ಲದಂತಾಗಿದೆ. ಜನರ ಜೀವನ ಕ್ರಮ ಬದಲಾಗಿ ಸಂಘ ಜೀವಿಯಾಗಿದ್ದ ಮನುಷ್ಯ ಇಂದು ಏಕಾಂಗಿಯಾಗಿ ಜೀವ, ಜೀವನಕ್ಕಾಗಿ ಹೋರಾಟ ಮಾಡುವ ಪರಿಸ್ಥಿತಿ ಬಂದೊದಗಿದೆ. ಇಂತಹ ಸಂದರ್ಭದಲ್ಲಿ ಜನರಿಗೆ ಘನತೆಯ ಬದುಕನ್ನು ಕಟ್ಟಿಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದರು.

ಸ್ಲಂ ಜನಾಂದೋಲನ ಕರ್ನಾಟಕ ಸಮಿತಿಯ ರಾಜ್ಯ ಸಂಚಾಲಕ ನರಸಿಂಹಮೂರ್ತಿ ಮಾತನಾಡಿ, ಲಾಕ್‌ಡೌನ್ ಅವಧಿಯಲ್ಲಿ ಪ್ರತಿ ಬಿಪಿಎಲ್ ಕುಟುಂಬಕ್ಕೆ ಪ್ರತಿ ತಿಂಗಳು 10 ಸಾವಿರ ರೂ.ಗಳನ್ನು ಪರಿಹಾರವಾಗಿ ಘೋಷಣೆ ಮಾಡುವಂತೆ, ಕೋವಿಡ್ ಸಮಯದಲ್ಲಿ ಸೋಂಕಿಗೆ ಒಳಗಾದವರ ಚಿಕಿತ್ಸಾ ವೆಚ್ಚ ಸಂಪೂರ್ಣ ಸರ್ಕಾರವೇ ಭರಿಸಬೇಕು. ಸೋಂಕಿನಿಂದ ಮರಣ ಹೊಂದಿದವರ ಕುಟುಂಬಕ್ಕೆ ನೀಡುತ್ತೇವೆ ಎಂದು ಹೇಳಲಾಗಿರುವ 1 ಲಕ್ಷ ರೂ. ಪರಿಹಾರವನ್ನು 10 ಲಕ್ಷಕ್ಕೆ ಹೆಚ್ಚಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸ್ಲಂ ಜನಾಂದೋಲನ ಕರ್ನಾಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೇಣುಕಾ ಯಲ್ಲಮ್ಮ ಹಾವೇರಿ ಮಾತನಾಡಿ, ಮುಂಬರುವ ದಿನಗಳಲ್ಲಿ ಮಕ್ಕಳ ಮೇಲೆ ಬೀರಲಿರುವ ಕೋವಿಡ್‌ನ 3ನೇ ಅಲೆಗೂ ಮುನ್ನ ಎಲ್ಲರಿಗೂ ವಿಮೆಯ ಮೂಲಕ ಉಚಿತ ಚಿಕಿತ್ಸೆಗೆ ನೆರವಾಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸ್ಲಂ ಜನಾಂದೋಲನ ಕರ್ನಾಟಕ ಸಮಿತಿಯ ಗೌರವಾಧ್ಯಕ್ಷ ಶಬ್ಬೀರ್‌ಸಾಬ್, ಅಧ್ಯಕ್ಷೆ ಶಹೀನಾಬೇಗಂ, ಪದಾಧಿಕಾರಿಗಳಾದ ಸಾವಿತ್ರಮ್ಮ, ಬಾಲಪ್ಪ, ಸುಹೀಲ್ ಭಾಷಾ ಮತ್ತು ಗೃಹ ಕಾರ್ಮಿಕರ ಸಂಘದ ಕಾರ್ಯದರ್ಶಿ ರಂಗಮ್ಮ, ಲಕ್ಷ್ಮಿ, ರಮೇಶ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಪ್ರಾಣಿಗಳಿಗಿಂತ ಮನುಷ್ಯರಲ್ಲೇ ಕೋವಿಡ್ ಹೆಚ್ಚು ಹೊಂದಿಕೆ

ಮೆಲ್ಬೋರ್ನ್, ಜೂ. 25 - ಕೊವಿಡ್ ಸೋಂಕು ತರುವ ವೈರಸ್ ಬಾವಲಿ ಇಲ್ಲವೇ ಪೆಂಗೊಲಿನ್‌ಗಳಿಗಿಂತಲೂ ಮನುಷ್ಯರಿಗೇ ಹೆಚ್ಚು ಹೊಂದಿಕೆಯಾಗುತ್ತಿದೆ ಎಂದು ಅಧ್ಯಯನವೊಂದು ತಿಳಿಸಿದೆ. ಇದರಿಂದಾಗಿ ವೈರಸ್ ಮೂಲದ ಬಗ್ಗೆ ಹಲವಾರು ಪ್ರಶ್ನೆಗಳು ಹುಟ್ಟಿಕೊಂಡಿವೆ.

ಆಸ್ಟ್ರೇಲಿಯಾದ ಫ್ಲೈಂಡರ್ಸ್ ವಿಶ್ವವಿದ್ಯಾನಿಲಯ ಹಾಗೂ ಲಾ ಟ್ರೊಬೆ ವಿಶ್ವವಿದ್ಯಾನಿಲಯದ ಸಂಶೋಧಕರು ಕೊರೊನಾ ವೈರಸ್ ಅನ್ನು ಉನ್ನತ ಕಂಪ್ಯೂಟರ್ ಮಾದರಿ ಮೂಲಕ ಅಧ್ಯಯನ ನಡೆಸಿ ಈ ವರದಿ ರೂಪಿಸಿದ್ದಾರೆ. ಮನುಷ್ಯರು ಹಾಗೂ 12 ಪ್ರಾಣಿಗಳಿಗೆ ಕೊರೊನಾ ಹರಡುವ ಕುರಿತು ಅಧ್ಯಯನ ನಡೆಸಿದ ವರದಿಯನ್ನು ಸೈಂಟಿಫಿಕ್ ರಿಪೋರ್ಟ್ಸ್ ನಿಯತಕಾಲಿಕದಲ್ಲಿ ಪ್ರಕಟಿಸಲಾಗಿದೆ. ಈ ಅಧ್ಯಯನದ ಪ್ರಕಾರ ಪ್ರಾಣಿಗಳಿಗಿಂತ ಮನುಷ್ಯರಿಗೇ ಕೊರೊನಾ ಹೆಚ್ಚು ಬಲವಾಗಿ ಅಂಟಿಕೊಳ್ಳುತ್ತದೆ. ಸಾಮಾನ್ಯವಾಗಿ ಯಾವುದಾದರೂ ಪ್ರಾಣಿಯಿಂದ ವೈರಸ್ ಬಂದಿದ್ದರೆ, ಮೂಲ ಪ್ರಾಣಿಗೆ ವೈರಸ್ ಹೆಚ್ಚು ಬಲವಾಗಿ ಅಂಟಿಕೊಂಡಿರುತ್ತದೆ ಎಂದು ಸಂಶೋಧಕರು ಹೇಳಿದ್ದಾರೆ.

ಮನುಷ್ಯರಿಗೆ ವೈರಸ್ ಹೆಚ್ಚು ಬಲವಾಗಿ ಅಂಟಿಕೊಳ್ಳುತ್ತಿರುವುದರಿಂದ ಸೋಂಕು ಬಲವಾಗುತ್ತಿದೆ ಎಂದು ಸಂಶೋಧನೆಯಲ್ಲಿ ಭಾಗಿಯಾಗಿದ್ದ ಲಾ ಟ್ರೊಬೆ ವಿಶ್ವವಿದ್ಯಾನಿಲಯದ ಅಧ್ಯಾಪಕ ಡೇವಿಡ್ ವಿಂಕ್ಲರ್ ಹೇಳಿದ್ದಾರೆ.

ಪೆಂಗೊಲಿನ್‌ಗಳಲ್ಲಿ ಕೊರೊನಾ ವೈರಸ್ ಕಂಡು ಬಂದಿದೆ ಎಂದು ಆರಂಭದ ದಿನಗಳಲ್ಲಿ ಹೇಳಿದ್ದು ತಪ್ಪಾಗಿದೆ. ಪೆಂಗೊಲಿನ್‌ಗಳಲ್ಲಿ ಕಂಡು ಬಂದಿರುವ ಕೊರೊನಾ ವೈರಸ್ ಹಾಗೂ ಮನುಷ್ಯರಲ್ಲಿರುವ ವೈರಸ್ ನಡುವಿನ ಅಂತರ ಶೇ.90ಕ್ಕಿಂತ ಕಡಿಮೆ ಇದೆ. ಪೆಂಗೊಲಿನ್‌ಗಳಿಂದ ವೈರಸ್ ಬಂದಿಲ್ಲ ಎಂದವರು ಹೇಳಿದ್ದಾರೆ.

# ಮುಖರ್ಜಿ ಜನಸೇವೆ, ಬದ್ಧತೆ ನಮಗೆ ಸ್ಫೂರ್ತಿ

## ಹರಪನಹಳ್ಳಿ ತಾಲ್ಲೂಕು ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್



ಹರಪನಹಳ್ಳಿ, ಜೂ.25- ಶ್ಯಾಮ್‌ಪ್ರಸಾದ್ ಮುಖರ್ಜಿಯವರ ಉದಾತ್ತ ಆದರ್ಶಗಳು, ಆಲೋಚನೆಗಳು ಮತ್ತು ಜನಸೇವೆ ಬದ್ಧತೆ ನಮಗೆ ಸದಾ ಸ್ಫೂರ್ತಿಯಾಗಿವೆ ಎಂದು ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್ ಹೇಳಿದರು.

ತಾಲ್ಲೂಕಿನ ಹಲವಾಗಲು ಗ್ರಾಮದ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯಲ್ಲಿ ಭಾರತೀಯ ಜನಸಂಘದ ಸಂಸ್ಥಾಪಕ ಶ್ಯಾಮ್‌ಪ್ರಸಾದ್ ಮುಖರ್ಜಿಯವರ 68 ನೇ ಪುಣ್ಯಸ್ಮರಣೆ ಅಂಗವಾಗಿ ಸಸಿ ನೆಟ್ಟು, ನೀರು ಹಾಕಿದ ನಂತರ ಮಾತನಾಡಿದ ಅವರು, ಮುಖರ್ಜಿಯವರು ನೀತಿ ತತ್ವದ ಆಧಾರದ ಮೇಲೆ ನೆಹರೂ ನೇತೃತ್ವದ ಮಂತ್ರಿ ಮಂಡಲಕ್ಕೆ ರಾಜೀನಾಮೆ ಕೊಟ್ಟು ಮಂತ್ರಿ ಪದವಿ ತ್ಯಾಗ ಮಾಡಿದ ಸ್ವಾತಂತ್ರ್ಯ ಭಾರತದ ಪ್ರಥಮ ರಾಷ್ಟ್ರ ನಾಯಕರಾಗಿದ್ದಾರೆ ಎಂದು ಹೇಳಿದರು.

ಶ್ಯಾಮ್‌ಪ್ರಸಾದ್ ಮುಖರ್ಜಿಯವರು ದೇಶದ ಪರಿಸ್ಥಿತಿ ಅಧೋಗತಿಗೆ ಬಂದಾಗ ರಾಜಕೀಯ ಅಸ್ಥಿರತೆ, ಆಡಳಿತ ದೋಷ ಕಂಡಾಗ ಭಾರತೀಯ ಜನಸಂಘ ಎಂಬ ಹೊಸ ಪಕ್ಷಕ್ಕೆ ನಾಂದಿ ಹಾಡಿದರು. ಅವರ ಪ್ರತಿ ಮಾತಿನಲ್ಲಿ ಮತ್ತು ಕಾರ್ಯಗಳಲ್ಲಿ ದೇಶಾಭಿಮಾನ ಎದ್ದು ಕಾಣುತ್ತಿತ್ತು.

ದುಷ್ಟ ಶಕ್ತಿಗಳಿಂದ ದೇಶ ವಿಭಜಿಸುವ ಹುನ್ನಾರ ನಡೆದಾಗ ಪ್ರತಿ ಹಂತದಲ್ಲೂ ವಿರೋಧಿಸುತ್ತಾ ಬಂದು ದೇಶದ ಏಕತೆ ಮತ್ತು ಅಖಂಡತೆ, ಪ್ರೇಮ, ಕಾಳಜಿ ಭಾರತೀಯರಿಗೆ ಅಪಾರ ಗೌರವ ಮೂಡಿಸುತ್ತದೆ ಎಂದು ಹೇಳಿದರು.

ಮುಖರ್ಜಿಯವರು ಸ್ವಾತಂತ್ರ್ಯೋತ್ತರದಲ್ಲಿ ಹಿಂದೂಗಳ ಮೇಲಿನ ಶೋಷಣೆ ವಿರುದ್ಧ ಪ್ರಮುಖ ಧ್ವನಿಯಾಗಿ ಜನಸಂಘ ಪಕ್ಷ ಕಟ್ಟಿ ಜಮ್ಮು ಕಾಶ್ಮೀರದ ಹಿಂದೂಗಳ ಪರವಾಗಿ ತಮ್ಮ ಜೀವನವನ್ನು ತ್ಯಾಗ ಮಾಡಿದ ಮಹಾನ್ ನಾಯಕ ಎಂದು ಬಣ್ಣಿಸಿದರು.

1953 ಅಕ್ಟೋಬರ್ 23 ರಂದು ಕಾಶ್ಮೀರವನ್ನು ಭಾರತದಲ್ಲಿಯೇ ಉಳಿಸಲು ನಡೆಸಿದ ಹೋರಾಟದಲ್ಲಿ ನಿಗೂಢ ರೀತಿಯಲ್ಲಿ ಸಾವನ್ನಪ್ಪಿದರು. ದೇಶದ ಏಕತೆಗೆ ಶ್ರಮಿಸಿದ ಮಹಾನ್ ನಾಯಕ ಶ್ಯಾಮ್‌ಪ್ರಸಾದ್ ಮುಖರ್ಜಿಯವರ ಪುಣ್ಯತಿಥಿಯನ್ನು ಬಲಿದಾನದ ದಿನವಾಗಿ ಆಚರಣೆ ಮಾಡಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಮುಖಂಡರಾದ ಹಲವಾಗಲು ದ್ಯಾಮಪ್ಪ, ವೀರಭದ್ರಪ್ಪ, ಬೇಲೂರು ನಾಗರಾಜ್, ದೊಡ್ಡ ಮೂಕಪ್ಪ, ಮಡಿವಾಳರ ಅಂಜಿನಪ್ಪ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

# 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಲಸಿಕೆ

**50,132 ವಿದ್ಯಾರ್ಥಿಗಳು, 3,619 ಬೋಧಕರು ಹಾಗೂ 1,905 ಬೋಧಕೇತರ ಸಿಬ್ಬಂದಿಗಳು ಸೇರಿದಂತೆ ಒಟ್ಟು 55,656 ಜನರಿಗೆ ಲಸಿಕೆ ಗುರಿ**

**(1ನೇ ಪುಟದಿಂದ)** ಲಸಿಕೆ ಕ್ಯಾಂಪ್ ಏರ್ಪಡಿಸುವ ಸ್ಥಳ, ದಿನವನ್ನು ಆರೋಗ್ಯ ಇಲಾಖೆ ನಿಗದಿಪಡಿಸಲಿದೆ. ಲಸಿಕೆ ಕಾರ್ಯಕ್ರಮ ಯಶಸ್ವಿಗೊಳಿಸಲು ಇದಕ್ಕಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುವುದು.

ದಾವಣಗೆರೆ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ 29,485 ಪದವಿ ಹಾಗೂ 2,227 ಸ್ನಾತಕೋತ್ತರ ಪದವಿ ವಿದ್ಯಾರ್ಥಿ ಗಳಿಗೆ ಲಸಿಕೆ ಹಾಕಬೇಕಿದೆ. ಈ ಕಾರ್ಯಕ್ರಮಕ್ಕೆಂದೇ ಪ್ರತ್ಯೇಕವಾಗಿ ಲಸಿಕೆ ಹಂಚಿಕೆ ಮಾಡಲಾಗುವುದಿಲ್ಲ, ಸರ್ಕಾರದ ಸೂಚನೆಯಂತೆ ಜಿಲ್ಲೆಯಲ್ಲಿ ಈಗಾಗಲೆ ನಡೆಯುತ್ತಿರುವ ಲಸಿಕಾ ಕಾರ್ಯಕ್ರಮದ ಜೊತೆ ಜೊತೆಗೆ, ವಿದ್ಯಾರ್ಥಿಗಳಿಗೂ ಲಸಿಕೆ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲ ಕಾಲೇಜುಗಳ ಪಟ್ಟಿಯನ್ನು ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾಲೇಜುಗಳಲ್ಲಿ ನಡೆಸಲಾಗುವ ಲಸಿಕಾ ಕ್ಯಾಂಪ್ ಕಾರ್ಯಕ್ರಮದ ಸಂದರ್ಭದಲ್ಲಿ ಕೋವಿ ಡ್‌ಗೆ ಸಂಬಂಧಿಸಿದಂತೆ ಹಾಗೂ ಲಸಿಕೆ ನೀಡಿಕೆ ಗಾಗಿ ಸರ್ಕಾರ ಹೊರಡಿಸಿರುವ ಎಲ್ಲ ಮಾರ್ಗಸೂ ಚಿಗಳನ್ನು ಅಧಿಕಾರಿಗಳು ತಪ್ಪದೆ ಪಾಲಿಸಬೇಕು, ಇದಕ್ಕಾಗಿ ಕಾಲೇಜುಗಳಲ್ಲಿ ಸೂಕ್ತ ಕೊಠಡಿಗಳನ್ನು ಪರಿಶೀಲಿಸಿ, ನಿಗದಿಪಡಿಸಿಕೊಳ್ಳಬೇಕು ಈ ಕಾರ್ಯಕ್ರಮದಿಂದ ಸಾರ್ವಜನಿಕರಿಗೆ ನೀಡುವ ಲಸಿಕೆ ಕಾರ್ಯಕ್ರಮಕ್ಕೆ ಯಾವುದೇ ರೀತಿಯಲ್ಲಿ ಪರಿಣಾಮ ವಾಗದಂತೆ ಕ್ರಮ ವಹಿಸಲು ಸೂಚಿಸಿದರು.

ಸಭೆಯಲ್ಲಿ ಡಿಹೆಚ್‌ಓ ಡಾ. ನಾಗರಾಜ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ, ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ. ಶಶಿಧರ್ ಉಪಸ್ಥಿತರಿದ್ದರು.

# ಪತ್ರಕರ್ತರ ಸಮಸ್ಯೆ ಬಗೆಹರಿಸಲು ವಾರ್ತಾ ಇಲಾಖೆ ಆಯುಕ್ತರ ಭರವಸೆ



ಬೆಂಗಳೂರು, ಜೂ.25- ತಾಲ್ಲೂಕು ಮಟ್ಟದ ಪತ್ರಕರ್ತರಿಗೆ ಇರುವ ಅನೇಕ ಸಮಸ್ಯೆಗಳ ಕುರಿತಂತೆ ಸರ್ಕಾರದ ಜೊತೆ ಶೀಘ್ರ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ವಾರ್ತಾ ಇಲಾಖೆಯ ಆಯುಕ್ತ ಡಾ. ಹರ್ಷ ಭರವಸೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಕರ್ನಾಟಕ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಸಂಚಾಲಕ ಮದನ್ ಗೌಡ ಅವರುಗಳ ಅವರ ನೇತೃತ್ವದಲ್ಲಿ ನಡೆಸಿದ ಜೂಮ್ ಮೀಟ್ ನಲ್ಲಿ ಹರ್ಷ ಅವರು ಮಾತನಾಡಿದರು.

ಪತ್ರಕರ್ತರಿಗೆ ಆರೋಗ್ಯ ಕಾರ್ಡ್‌ನಲ್ಲಿರುವ ಸಮಸ್ಯೆ ಸೇರಿದಂತೆ ಹಲವಾರು ನ್ಯೂನ್ಯತೆ ಮತ್ತು ಬೇಡಿಕೆಗಳನ್ನು ಈಡೇರಿಸುವಂತೆ ಶಿವಾನಂದ ತಗಡೂರು ಮತ್ತು ಮದನ್ ಗೌಡ ಅವರುಗಳು ಆಯುಕ್ತರನ್ನು ಕೇಳಿಕೊಂಡರು. ಸಮಸ್ಯೆಗಳನ್ನು ಆಲಿಸಿದ ಆಯುಕ್ತರು, ಈ ಬಗ್ಗೆ ಆಯಾ ಜಿಲ್ಲೆಗಳ ಪತ್ರಕರ್ತರ ಸಂಘದ ಪದಾಧಿಕಾರಿಗಳು ಮತ್ತು ವಾರ್ತಾಧಿಕಾರಿಗಳ ಜೊತೆ ಮಾತನಾಡಿ ನಂತರ ಸರ್ಕಾರದೊಂದಿಗೆ ಚರ್ಚಿಸಿ ಬಗೆಹರಿಸುತ್ತೇನೆ ಎಂದು ತಿಳಿಸಿದರು.

ಹೊಸ ಜಾಹೀರಾತು ನೀತಿ ಮತ್ತು ಪತ್ರಿಕೆಗಳ ಜಾಹೀರಾತು ದರ ಪರಿಷ್ಕರಣೆ ಬಗ್ಗೆಯೂ ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಅವರು ಹೇಳಿದರು. ಸಂಘದ ರಾಜ್ಯ ಉಪಾಧ್ಯಕ್ಷ ಮತ್ತಿಕೆರೆ ಜಯರಾಮ್, ಕಾರ್ಯದರ್ಶಿ ಸಂಜೀವ್ ರಾವ್ ಕುಲಕರ್ಣಿ, ಸೋಮಶೇಖರ್ ಕೆರಗೋಡು, ಡಿ.ಎಲ್. ಲಿಂಗರಾಜ, ದಾವಣಗೆರೆಯ ಹಿರಿಯ ಪತ್ರಿಕೋದ್ಯಮಿ ಕೆ. ಚಂದ್ರಣ್ಣ ಅವರು ನಿಯೋಗದಲ್ಲಿದ್ದರು.

# ವ್ಯಕ್ತಿ ಮೇಲೆ ಗುಂಡು

**(1ನೇ ಪುಟದಿಂದ)** ಎಂಬುವವರು ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗುಂಡು ಹಾರಿಸಿದ ಗಾರ್ಡ್‌ನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಬೆಳಿಗ್ಗೆ 11.30ಕ್ಕೆ ಬ್ಯಾಂಕ್‌ಗೆ ಬಂದಾಗ ಭದ್ರತಾ ಸಿಬ್ಬಂದಿ ಕೇಶವ ಪ್ರಸಾದ್ ಮಿಶ್ರ ಜೊತೆ ಮಾತಿನ ಚಕಮಕಿ ನಡೆಸಿದರು. ಆಗ ಮಿಶ್ರಾ ಕೋಪಗೊಂಡು ಗುಂಡು ಹಾರಿಸಿದ್ದಾರೆ ಎನ್ನಲಾಗಿದೆ. ಮಾಸ್ಕ್ ರಹಿತವಾಗಿ ಬ್ಯಾಂಕ್‌ಗೆ ನುಗ್ಗಲು ಯತ್ನಿಸಿದ್ದ ರಾಜೇಶ್ ಕುಮಾರ್, ಅದನ್ನು ಪ್ರಶ್ನಿಸಿದ್ದಕ್ಕಾಗಿ ತಮ್ಮನ್ನು ಅವಹೇಳನ ಮಾಡಿದ. ಗ್ರಾಹಕ ಬಲವಂತವಾಗಿ ನುಗ್ಗಿದಾಗ ಗುಂಡು ಹಾರಿಸಿದ್ದಾಗಿ ಗಾರ್ಡ್ ತಿಳಿಸಿರುವುದಾಗಿ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

# ಸಮಾರಂಭಕ್ಕೆ ಷರತ್ತಿನ ಅನುಮತಿ

**(1ನೇ ಪುಟದಿಂದ)** ಡೆಲ್ಟಾ ಬಗ್ಗೆ ರಾಜ್ಯದಲ್ಲಿರುವ ಪ್ರಸ್ತುತ ಇರುವ ಪರಿಸ್ಥಿತಿ ಬಗ್ಗೆಯೂ ಸಭೆಯಲ್ಲಿ ಪರಾಮರ್ಶೆ ನಡೆಸಲಾಯಿತು. ರಾಜ್ಯದಲ್ಲಿ ಡೆಲ್ಟಾ ವೈರಸ್ ಸದ್ಯಕ್ಕೆ ಹತೋಟಿಯಲ್ಲಿದ್ದು ವೈರಸ್ ಬಗ್ಗೆ ತೀವ್ರ ನಿಗಾ ಇಡಲು ಸೂಚಿಸಲಾಯಿತು. ಮಹಾರಾಷ್ಟ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಡೆಲ್ಟಾ ವೈರಸ್ ಕಂಡು ಬರುತ್ತಿದೆ ಬಾರ್ಡರ್‌ಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಸೂಚಿಸಲಾಯಿತು.

ಮಹಾರಾಷ್ಟ್ರ ಮತ್ತು ಕೇರಳದಿಂದ ಬರುವವರ ಬಗ್ಗೆನು ಸಹ ತೀವ್ರ ನಿಗಾ ಇಟ್ಟು ಅವರನ್ನು ಕೊರೊನಾ ಟೆಸ್ಟ್ ಗೆ ಒಳಪಡಿಸುವಂತೆ ಸೂಚಿಸಲಾಯಿತು. ಕೇರಳ ಹಾಗೂ ಮಹಾರಾಷ್ಟ್ರದಲ್ಲಿ ಎರಡನೇ ಅಲೆಯ ತೀವ್ರತೆ ಕಡಿಮೆಯಾಗದಿರುವ ಆತಂಕ ವ್ಯಕ್ತಪಡಿಸಿ ರಾಜ್ಯದಲ್ಲಿ ಕೋವಿಡ್ ನಿರ್ಬಂಧಗಳನ್ನು ಸಡಿಲಿಗೊಳಿಸಿದರೂ ಎಚ್ಚರಿಕೆಯಿಂದ ಇರುವಂತೆ ರಾಜ್ಯದ ಜನರಿಗೆ ಮನವಿ ಮಾಡಲಾಯಿತು. ಅಪೌಷ್ಟಿಕತೆ ಇರುವ ಮಕ್ಕಳನ್ನು ಗುರುತಿಸಿ, ಅವರಿಗೆ ಸೂಕ್ತ ಪೌಷ್ಟಿಕ ಆಹಾರ ಒದಗಿಸಲು ವೈದ್ಯಕೀಯ ನಿಗಾ ವಹಿಸಲು ಸೂಚಿಸಲಾಯಿತು.

# ವಿದ್ಯಾರ್ಹತೆ ನಿಗದಿ

**(1ನೇ ಪುಟದಿಂದ)** ವರ್ಷ ಮೀರಿದವರು ಮಾತ್ರ ಈ ಹುದ್ದೆಯಲ್ಲಿರಬೇಕು. ಬ್ಯಾಂಕಿಂಗ್ ವಲಯದಲ್ಲಿ ಕನಿಷ್ಠ ಎಂಟು ವರ್ಷ ಅನುಭವ ಹೊಂದಿರಬೇಕು ಎಂದು ತಿಳಿಸಲಾಗಿದೆ.

ಒಬ್ಬ ವ್ಯಕ್ತಿಯನ್ನು ಗರಿಷ್ಠ ಐದು ವರ್ಷದ ಹುದ್ದೆಗೆ ಮಾತ್ರ ನೇಮಿಸಬಹುದು. ಆದರೆ, ಇವರು 15 ವರ್ಷಕ್ಕಿಂತ ಹೆಚ್ಚು ಕಾಲ ಹುದ್ದೆಯಲ್ಲಿರುವಂತಿಲ್ಲ. ಮೂರು ವರ್ಷದ ಬಿಡುವಿನ ನಂತರ ಮತ್ತೆ ನೇಮಕ ಮಾಡಿಕೊಳ್ಳಬಹುದು ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

# ಹೆಚ್ಚು ರೈಲು ಸೌಕರ್ಯ ಕಲ್ಪಿಸಲು ಆಗ್ರಹ

ದಾವಣಗೆರೆ, ಜೂ.25- ಹುಬ್ಬಳ್ಳಿ ನೈರುತ್ಯ ರೈಲ್ವೆ ವಲಯದ ವತಿಯಿಂದ ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚಿನ ರೈಲುಗಳ ಸೌಕರ್ಯ ಕಲ್ಪಿಸುವಂತೆ ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಕುಂದು-ಕೊರತೆ ನಿವಾರಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಒತ್ತಾಯಿಸಿದ್ದಾರೆ. ಹುಬ್ಬಳ್ಳಿ-ಅರಸೀಕೆರೆ ಪ್ಯಾಸೆಂಜರ್ ರೈಲು, ಹುಬ್ಬಳ್ಳಿ-ಬೆಂಗಳೂರು ಪ್ಯಾಸೆಂಜರ್, ಹುಬ್ಬಳ್ಳಿ-ಬೆಂಗಳೂರು ಫಾಸ್ಟ್ ಪ್ಯಾಸೆಂಜರ್, ಹರಿಹರ-ಬೆಂಗಳೂರು ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲುಗಳ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಮನವಿ ಮಾಡಿದ್ದಾರೆ.

# 89 ಪಾಸಿಟಿವ್ 299 ಗುಣಮುಖ

**(1ನೇ ಪುಟದಿಂದ)** ಜಗಳೂರು 3, ಚನ್ನಗಿರಿ 18, ಹೊನ್ನಾಳಿ 11 ಹಾಗೂ ಹೊರ ಜಿಲ್ಲೆಯ 6 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 1488 ಸಕ್ರಿಯ ಪ್ರಕ ರಣಗಳಿದ್ದು, ಇಲ್ಲಿಯವರೆಗೆ 526 ಜನರು ಮೃತಪಟ್ಟಿದ್ದಾರೆ.

**7 ಜನರಲ್ಲಿ ಬ್ಲಾಕ್ ಫಂಗಸ್ :** ಏಳು ಬ್ಲಾಕ್ ಫಂಗಸ್ ಪ್ರಕರಣಗಳು ವರದಿಯಾಗಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ 104 ಜನರಲ್ಲಿ ಬ್ಲಾಕ್ ಫಂಗಸ್ ಕಾಯಿಲೆ ಕಾಣಿಸಿಕೊಂಡಿತ್ತು. ಪ್ರಸ್ತುತ 50 ಸಕ್ರಿಯ ಪ್ರಕರಣಗಳಿವೆ.

# ಡೆಲ್ಟಾ ಪ್ಲಸ್: ಆತಂಕ ಬೇಡ

**(1ನೇ ಪುಟದಿಂದ)** ಜೀನೋಮ್ ಸಿಕ್ವೆನ್ಸ್ ಲ್ಯಾಬ್ ಆರಂಭಿಸಲಾಗುತ್ತಿದೆ ಎಂದು ತಿಳಿಸಿದರು. ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಸಭೆಯಲ್ಲಿ ಕೋವಿಡ್ ನಿಯಂತ್ರಣ ಕ್ರಮ ಕುರಿತು ಚರ್ಚೆಯಾಗಲಿದೆ. ಡೆಲ್ಟಾ ಮತ್ತು ಡೆಲ್ಟಾ ಪ್ಲಸ್ ಚಿಕಿತ್ಸೆಯಲ್ಲಿ ಕೆಲ ವ್ಯತ್ಯಾಸ ಇದೆ. ಈ ಬಗ್ಗೆ ತಜ್ಞರು ತಿಳಿಸಿದ್ದಾರೆ ಎಂದರು.

# ತಾ.ಗಳಲ್ಲಿ ಆಸ್ಪತ್ರೆ

**(1ನೇ ಪುಟದಿಂದ)** ರೇಣುಕಾಚಾರ್ಯ ಬೀಳ್ಕೊಟ್ಟರು.

**ಸೋಂಕಿತರಿಗೆ ಊಟದ ವ್ಯವಸ್ಥೆ:** ಅರಬಗಟ್ಟೆ ಗ್ರಾಮದ ಕೋವಿಡ್ ಕೇರ್ ಸೆಂಟರ್, ಹೊನ್ನಾಳಿ ಎಪಿಎಂಸಿ, ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ, ಸಾರ್ವಜನಿಕ ಆಸ್ಪತ್ರೆ, ಪೊಲೀಸ್ ಠಾಣೆ ಸಿಬ್ಬಂದಿ, ನ್ಯಾಮತಿ ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಲಸಿಕೆ ಹಾಕಿಸಿಕೊಳ್ಳಲು ಬಂದ ಸಾರ್ವಜನಿಕರು, ಪೊಲೀಸ್ ಠಾಣೆ ಹಾಗೂ ಬೆಸ್ಕಾಂ ಇಲಾಖೆ ಸಿಬ್ಬಂದಿ ಸೇರಿದಂತೆ ಒಟ್ಟು 1,500 ಜನರಿಗೆ ಶುಕ್ರವಾರ ಬೆಳಗಿನ ಉಪಹಾರ ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆ ಯನ್ನು ರೇಣುಕಾಚಾರ್ಯ ಮಾಡಿಸಿದ್ದರು.

# ತೆರಿಗೆ ವಿನಾಯಿತಿ

**(1ನೇ ಪುಟದಿಂದ)** ನೀಡುವ ನೆರವಿಗೆ ಆದಾಯ ತೆರಿಗೆ ವಿನಾಯಿತಿ ನೀಡಲಾಗಿದೆ. ಕೊರೊನಾ ಚಿಕಿತ್ಸೆಗೆ ಹಣ ನೀಡಿದಾಗಲೂ ತೆರಿಗೆ ವಿನಾಯಿತಿ ಲಭ್ಯವಾಗಲಿದೆ. ಅನ್ಯ ವ್ಯಕ್ತಿಗಳಿಂದ ನೆರವು ಪಡೆದಾಗ ಹತ್ತು ಲಕ್ಷ ರೂ.ಗಳವರೆಗೆ ತೆರಿಗೆ ವಿನಾಯಿತಿ ಇದೆ.

# ಶಾಲಾರಂಭ ಸೋಮವಾರ ನಿರ್ಧಾರ

**(1ನೇ ಪುಟದಿಂದ)** ಯಾವುದಾದರೂ ರೂಪದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಂಪರ್ಕ ಏರ್ಪಡಲೇಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆಂದು ಸಚಿವರು ತಿಳಿಸಿದರು.

ರಾಜ್ಯದ ವಿವಿಧೆಡೆ ಮಕ್ಕಳು ಬಹುಕಾಲ ಶಾಲೆಯಿಂದ ಹೊರಗುಳಿದಿರುವುದರಿಂದ ಪೋಷಕರು ಮತ್ತು ಮಕ್ಕಳು ಶಾಲೆಗೆ ಬರಲು ಕಾತರರಾಗಿರುವುದು ಸಮೀಕ್ಷೆಯಿಂದ ವ್ಯಕ್ತವಾಗಿದೆ ಎಂದು ಕೆಲ ಸ್ವಯಂ ಸೇವಾ ಸಂಘಟನೆಗಳ ಪ್ರತಿನಿಧಿಗಳು ಪ್ರತಿಪಾದಿಸಿದರೆ, ಹಲವಾರು ಮಂದಿ ದೇಶದ ವಿವಿಧೆಡೆ ಅನುಸ ರಿಸಿದ ಕಳೆದ ವರ್ಷ ಪ್ರಾರಂಭಿ ಸಿದ್ದ ನಮ್ಮ ರಾಜ್ಯದ ಸುಧಾರಿತ ವಿದ್ಯಾಗಮ ಕಾರ್ಯಕ್ರಮವನ್ನು ಆರಂ ಭಿಸಿ, ಶಿಕ್ಷಕರು ಮಕ್ಕಳನ್ನು ತಲುಪುವುದು, ಲಾಕ್‌ಡೌನ್ ಅನ್‌ಲಾಕ್ ಮಾಡಿದಂತೆ ವಿಕೇಂದ್ರೀ ಕರಣ ರೂಪದಲ್ಲಿ ಸ್ಕೂಲ್ ಅನ್‌ಲಾಕ್ ಮಾಡುವ ಕುರಿತೂ ಸಲಹೆಗಳು ವ್ಯಕ್ತವಾಗಿವೆ ಅವರು ಹೇಳಿದರು.

ಶಾಲಾರಂಭದ ವಿಷಯದಲ್ಲಿ ಎಲ್ಲ ಕಡೆಯೂ ಒಂದೇ ಬಾರಿಗೆ ಶಾಲೆ ತೆರೆಯದಿದ್ದರೂ ತೊಂದರೆಯೇನೂ ಇಲ್ಲ, ಆದರೆ, ಆಯಾ ತಾಲ್ಲೂಕು, ಗ್ರಾಮ ಪಂಚಾಯ್ತಿ ಇಲ್ಲವೇ ಜಿಲ್ಲಾ ಹಾಗೆಯೇ ಗ್ರಾಮೀಣ ಪ್ರದೇಶ, ನಗರ ಪ್ರದೇಶ, ಹೋಬಳಿ, ತಾಲ್ಲೂಕು ಕೇಂದ್ರವಾರು ತರಗತಿ ಆರಂಭಿಸುವುದು. ಇಲ್ಲವೇ ಇತರೆ ರೂಪದಲ್ಲಿ ಮಕ್ಕಳನ್ನು ಉಪಾಧ್ಯಾಯರು ತಲುಪುವ ವಿಷಯಗಳ ಕುರಿತೂ ಪ್ರತಿನಿಧಿಗಳು ವಿವಿಧ ಸಲಹೆಗಳನ್ನು ನೀಡಿದರಲ್ಲದೇ, ಭೌತಿಕವಾಗಿ ಶಾಲೆಗಳನ್ನು ತೆರೆಯುವ ಕುರಿತು ಆಲೋಚಿಸಬೇಕೆಂದೂ ಪ್ರತಿಪಾದಿಸಿದರು ಎಂದು ಸುರೇಶ್ ಕುಮಾರ್ ತಿಳಿಸಿದರು.

ಆನ್‌ಲೈನ್, ದೂರದರ್ಶನ ಚಂದನಾ ಮೂಲಕ ಸಂವೇದಾ ಪಾಠಗಳು, ಯೂ-ಟ್ಯೂಬ್, ವಾಟ್ಸಾಪ್ ಮೂಲಕ ಹಾಗೆಯೇ ಮಕ್ಕಳು ವಾರದಲ್ಲಿ ಒಂದು ದಿನ ಶಾಲೆಗೆ ಬಂದು ಸಿದ್ಧಪಾಠಗಳನ್ನು ತೆಗೆದು ಕೊಂಡು ಹೋಗಿ ಇನ್ನೊಂದು ದಿನ ಅವುಗಳೊಂದಿಗೆ ಬಂದು ಸಂಶಯಗಳ ನಿವಾರಣೆಗೆ ಶಿಕ್ಷಕರನ್ನು ಭೇಟಿ ಮಾಡುವಂತಹುದು, ಶಾಲೆಗೆ ಬರಲಾಗದ ಮಕ್ಕಳಿಗೆ ಆಯಾ ಗ್ರಾಮ ಪಂಚಾಯ್ತಿ ಅಧಿಕಾರಿಗಳ ಇಲ್ಲವೇ ಸ್ವಯಂ ಸೇವಕರ ಮೂಲಕ ಸಿದ್ಧಪಠ್ಯಗಳನ್ನು ನೀಡು ವಂತಹ ಸಲಹೆಗಳೂ ವ್ಯಕ್ತವಾದವು. ವಿಶೇಷವಾಗಿ ಡಾ. ದೇವಿಶೆಟ್ಟಿ ವರದಿಯಂತೆ ತರಗತಿವಾರು, ಆಯಾ ಪ್ರದೇಶದ ಪಾಸಿಟಿವಿಟಿ ದರದ ಅನ್ವಯ ಶಾಲಾ ತರಗತಿಗಳನ್ನು ತೆರೆಯುವುದಾಗಲೀ ಇಲ್ಲವೇ ಶಾಲಾವರಣದಲ್ಲಿ ವಿದ್ಯಾಗಮ ತರಗತಿಗಳನ್ನು ನಡೆಸುವುದರ ಕುರಿತು ಆದ್ಯತೆ ನೀಡಬೇಕೆಂಬುದು ಬಹುತೇಕರ ಸಲಹೆಯಾಗಿದ್ದು, ಸದ್ಯದಲ್ಲೇ ಟಾಸ್ಕ್‌ಫೋರ್ಸ್ ರಚಿಸಿ ಒಂದು ತೀರ್ಮಾನಕ್ಕೂ ಬರಲಾಗುವುದು ಎಂದು ಅವರು ತಿಳಿಸಿದರು.

# ಹರಿಹರದಲ್ಲಿ ಜೂಜು : 12 ಮಂದಿ ಬಂಧನ, 11 ಲಕ್ಷಕ್ಕೂ ಅಧಿಕ ನಗದು ವಶ

ಹರಿಹರ, ಜೂ.25- ಇಸ್ಪೀಟ್ ಜೂಜಾಟ ಕೇಂದ್ರದ ಮೇಲೆ ಇಂದು ದಾಳಿ ನಡೆಸಿರುವ ಹರಿಹರ ನಗರ ಠಾಣೆ ಪೊಲೀಸರು, 12 ಜನರನ್ನು ಬಂಧಿಸಿ, 11 ಲಕ್ಷದ 70 ಸಾವಿರ ನಗದು ಸಹಿತ 4 ಕಾರುಗಳು ಮತ್ತು 4 ಬೈಕ್ ಗಳ ವಶಪಡಿಸಿಕೊಂಡಿದ್ದಾರೆ. ಲಲಿತ ಪ್ಯಾಲೇಸ್ ಬಳಿಯ ಇಸ್ಪೀಟ್ ಜೂಜಾಟದ ಮೇಲೆ ಡಿಸಿಆರ್‌ಬಿ ಘಟಕದ ಡಿವೈಎಸ್ಪಿ ಬಿ.ಎಸ್. ಬಸವರಾಜ್, ಹರಿಹರ ನಗರ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಸುನೀಲ್ ತೇಲಿ ಹಾಗೂ ಪೊಲೀಸ್ ಸಿಬ್ಬಂದಿಯನ್ನೊಳಗೊಂಡ ತಂಡವು ದಾಳಿ ಮಾಡಿದೆ. ಇಸ್ಪೀಟ್ ಜೂಜಾಟದ ಘಟನಾ ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ. ರಾಜೀವ್ ಭೇಟಿ ನೀಡಿದ್ದರು.

# 1 ರಿಂದ ಖಾಸಗಿ ಬಸ್ ಸಂಚಾರ

ದಾವಣಗೆರೆ, ಜೂ.25- ಬರುವ ಜುಲೈ 1 ರಿಂದ ಶೇ. 20 ರಷ್ಟು ಪ್ರಯಾಣ ದರ ಏರಿಕೆಯೊಂದಿಗೆ ಜಿಲ್ಲೆಯಲ್ಲಿ ಬಸ್ ಸಂಚಾರ ಆರಂಭಿಸುವುದಾಗಿ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಎಸ್. ಮಂಜುನಾಥ್ ಕಂಬತ್ತಹಳ್ಳಿ ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕಳೆದ ಎರಡು ತಿಂಗಳಿನಿಂದ ಕೋವಿಡ್ ಲಾಕ್‌ಡೌನ್ ಹಿನ್ನೆಲೆಯಲ್ಲಿ ಖಾಸಗಿ ಬಸ್ ಮಾಲೀಕರು, ಚಾಲಕರು ಮತ್ತು ನಿರ್ವಾಹಕರು ತೀವ್ರ ಸಂಕಷ್ಟಕ್ಕೀಡಾಗಿದ್ದು, ಸರ್ಕಾರ ಖಾಸಗಿ ಬಸ್ ಮಾಲೀಕರ ಬಗ್ಗೆ ಕಿಂಚಿತ್ತು ಕಾಳಜಿ ತೋರುತ್ತಿಲ್ಲ. ಸಂಕಷ್ಟದಲ್ಲಿರುವ ಚಾಲಕರು ಮತ್ತು ನಿರ್ವಾಹಕರಿಗೆ ಯಾವುದೇ ಪರಿಹಾರ ಘೋಷಣೆ ಮಾಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಖಾಸಗಿ ಬಸ್ ಮಾಲೀಕರು ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಕಾರಣ ಡಿಸೆಂಬರ್‌ವರೆಗಿನ ತೆರಿಗೆಯನ್ನು ಸಂಪೂರ್ಣ ವಿನಾಯಿತಿ (ಮನ್ನಾ) ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸರ್ಕಾರದ ನಿಯಮದಂತೆ ಬಸ್ ಪ್ರಯಾಣಕ್ಕೆ ಶೇ. 50 ರಷ್ಟು ಪ್ರಯಾಣಿಕರಿಗೆ ಅನುಮತಿ ನೀಡಿದೆ. ಆದರೆ ಶೇ. 100 ರಷ್ಟು ತೆರಿಗೆಯನ್ನು ಮುಂಗಡವಾಗಿಯೇ ಪಾವತಿಸಿದ್ದೇವೆ. ಆದರೆ ನಿಯಮದನ್ವಯ ನಮಗೆ ಅನ್ಯಾಯವಾಗುತ್ತದೆ ಎಂದು ಹೇಳಿದರು.

ಸರ್ಕಾರ ನಿಗದಿಪಡಿಸಿದ ಸೀಟ್‌ಗಳಿಗಷ್ಟೇ ತೆರಿಗೆ ತೆಗೆದುಕೊಳ್ಳಲಿ ಎಂದ ಅವರು, ಈಗಾಗಲೇ ಟೈರ್, ಡೀಸೆಲ್ ಖರೀದಿ ಸೇರಿದಂತೆ ಇತರೆ ಮೂಲಗಳಿಂದ ಬಸ್ ಮಾಲೀಕರು ಕೋಟ್ಯಂತರ ರೂ. ತೆರಿಗೆ ಸೇರಿದಂತೆ ಕೋಟ್ಯಂತರ ರೂ. ರಸ್ತೆ ತೆರಿಗೆ ಸಹ ಪಾವತಿಸುತ್ತಿದ್ದೇವೆ. ಆದರೆ ಕೋವಿಡ್ ಲಾಕ್ ಡೌನ್ ಸಂದರ್ಭದಲ್ಲಿ ಸರ್ಕಾರ ನೆರವಿಗೆ ಬಾರದಿರುವುದು ಅತ್ಯಂತ ಖಂಡನೀಯ ಎಂದರು.

ಕೆ.ಎಸ್.ಆರ್.ಟಿ.ಸಿ. ಪ್ರಯಾಣಿಕರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ಖಾಸಗಿ ಬಸ್‌ನವರೂ ನೀಡುತ್ತಿದ್ದು, ಬಸ್ ಸಂಚಾರದಲ್ಲಿ ನಮಗೇಕೆ ಈ ತಾರತಮ್ಯ? ಎಂದು ಪ್ರಶ್ನಿಸಿದರು.

ಈ ಕೂಡಲೇ ಸರ್ಕಾರ ಖಾಸಗಿ ಬಸ್ ಮಾಲೀಕರ ನೆರವಿಗೆ ಧಾವಿಸಬೇಕು. ಡಿಸೆಂಬರ್‌ವರೆಗೆ ತೆರಿಗೆಯನ್ನು ಸಂಪೂರ್ಣ ಮನ್ನಾ ಮಾಡಬೇಕು. ಇ.ಎಂ.ಐ. ಕಂತು ಪಾವತಿಗೆ 6 ತಿಂಗಳ ಕಾಲಾವಕಾಶ ನೀಡಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಬಸ್ ಮಾಲೀಕರ ಸಂಘದ ಪದಾಧಿಕಾರಿಗಳಾದ ಭೈರೇಶ್, ಎಂ.ಆರ್. ಸತೀಶ್, ಹೆಚ್.ಸಿ. ಮಹೇಶ್ ಪಲ್ಲಾಗಟ್ಟೆ, ಈರಣ್ಣ ಉಪಸ್ಥಿತರಿದ್ದರು.

# ಕೊರೊನಾ ಸಕಾರಾತ್ಮಕ ಪರಿಣಾಮಗಳನ್ನೂ ಬೀರಿದೆ

## ದೈವಜ್ಞ ಸಮಾಜದವರಿಗೆ ಸಾಮೂಹಿಕ ಕೋವಿಡ್ ಲಸಿಕೆ ಕಾರ್ಯಕ್ರಮದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ವಿಶ್ಲೇಷಣೆ

ದಾವಣಗೆರೆ, ಜೂ.25- ಕೊರೊನಾ ಕೇವಲ ನಕಾರಾತ್ಮಕ ಪರಿಣಾಮಗಳನ್ನಷ್ಟೇ ನಮ್ಮ ಮೇಲೆ ಬೀರಿಲ್ಲ. ಬದಲಾಗಿ, ಸಕರಾತ್ಮಕ ಪರಿಣಾಮಗಳನ್ನೂ ಕೂಡ ಉಂಟುಮಾಡಿದೆ. ಇದಕ್ಕೆ ಸಾಕ್ಷಿ ಎಂಬಂತೆ ಭಾರತದ ಆರೋಗ್ಯ ಕ್ಷೇತ್ರದಲ್ಲಿ ನಾವು ಸಾಕಷ್ಟು ಸ್ವಾವಲಂಬಿಯಾಗಿದ್ದೇವೆ ಎಂದು ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಅವರು ಹೇಳಿದರು.

ನಗರದ ದೈವಜ್ಞ ಯುವ ಘಟಕದ ವತಿಯಿಂದ ಅಕ್ಕಸಾಲಿಗ ಕುಶಲಕರ್ಮಿಗಳಿಗಾಗಿ ದೈವಜ್ಞ ಕಲ್ಯಾಣ ಮಂಟಪದಲ್ಲಿ ಇಂದು ಹಮ್ಮಿಕೊಂಡಿದ್ದ ಸಾಮೂಹಿಕ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಆರೋಗ್ಯ ಕ್ಷೇತ್ರವು ಮೂಲಭೂತ ಸೌಕರ್ಯಗಳನ್ನು ಹೊಂದುವ ಮೂಲಕ ಸಾಕಷ್ಟು ಸದೃಢವಾಗಿದೆ. ಕೊರೊನಾ ಬರುವುದಕ್ಕಿಂತ ಮುಂಚೆ ಒಂದೂ ಕೂಡ ಎನ್ 95 ಮಾಸ್ಕ್ ನಮ್ಮ ದೇಶದಲ್ಲಿ ತಯಾರಾಗುತ್ತಿದ್ದಿಲ್ಲ, ಈಗ ಪ್ರತಿದಿನ ಕೋಟ್ಯಾಂತರ ಮಾಸ್ಕ್‌ಗಳನ್ನು ತಯಾರಿಸುವ ಮಟ್ಟಕ್ಕೆ ಭಾರತ ಬೆಳೆದಿದೆ. ಇದಿಷ್ಟನ್ನು ನಮಗೆ ಕಲ್ಪಿಸಿಕೊಟ್ಟಿದ್ದು 'ಆತ್ಮ ನಿರ್ಭರ್ ಭಾರತ' ಎನ್ನುವ ಮಂತ್ರ ಎಂದು ಸಂಸದರು ವಿಶ್ಲೇಷಿಸಿದರು.



ಕೊರೊನಾ ಅತ್ಯಂತ ಏರುಮಟ್ಟದಲ್ಲಿದ್ದ ಸಂದರ್ಭದಲ್ಲಿ ಭಾರತದಲ್ಲಿ ಆಕ್ಸಿಜನ್ ಬಳಕೆಯ ಪ್ರಮಾಣ 10 ಪಟ್ಟು ಹೆಚ್ಚಾಗಿತ್ತು. ಈ ಬೇಡಿಕೆಯನ್ನು ನೆಲ, ಜಲ ಮತ್ತು ವಾಯುಮಾರ್ಗಗಳನ್ನು ಬಳಸಿಕೊಂಡು ಯಶಸ್ವಿಯಾಗಿ ನಿಭಾಯಿಸಿದ್ದು ಮೋದೀಜಿ ನೇತೃತ್ವದ ಕೇಂದ್ರ ಸರ್ಕಾರ. ಪಿ.ಎಂ. ಕೇರ್ಸ್ ನಿಧಿಯಲ್ಲಿ ದೇಶಾದ್ಯಂತ 50 ಸಾವಿರಕ್ಕೂ ಹೆಚ್ಚು ವೆಂಟಿಲೇಟರ್‌ಗಳನ್ನು ಒದಗಿಸಲಾಗಿದೆ. 1.5 ಲಕ್ಷದಷ್ಟು ಆಕ್ಸಿಜನ್ ಸಿಲಿಂಡರ್ ಹಾಗೂ ಲಕ್ಷಾಂತರ ಆಕ್ಸಿಜನ್ ಕಾನ್ಸೆಂಟ್ರೇಟರ್‌ಗಳನ್ನು ಖರೀದಿಸಿ ಸರ್ಕಾರಿ ಆಸ್ಪತ್ರೆಗಳಿಗೆ ವಿತರಣೆ ಮಾಡಲಾಗಿದೆ. ಕೋವಿಡ್‌ನಿಂದ ಅನಾಥರಾದ ಮಕ್ಕಳಿಗೆ ಪ್ರತಿ ತಿಂಗಳು ಸ್ಟೈಪಂಡ್ ಹಾಗೂ ವಿಮೆಯನ್ನು ಒದಗಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ ಎಂದು ಅವರು ತಿಳಿಸಿದರು.

ದೇಶಾದ್ಯಂತ 2084 ಕೊರೊನಾ ಆಸ್ಪತ್ರೆಗಳು, 4000 ಕ್ಕೂ ಹೆಚ್ಚು ಕೊರೋನಾ ಹೆಲ್ತ್ ಕೇರ್ ಸೆಂಟರ್, 1 ಲಕ್ಷಕ್ಕೂ ಹೆಚ್ಚು ಐ.ಸಿ.ಯು ಬೆಡ್, 16 ಲಕ್ಷಕ್ಕೂ ಹೆಚ್ಚು ಐಸೋಲೇಷನ್ ಬೆಡ್‌ಗಳನ್ನು ಕೊರೊನಾ ಸಂದರ್ಭದಲ್ಲಿ ಪ್ರಾರಂಭಿಸಲಾಗಿದೆ. ಪ್ರತಿ ದಿನ 20 ಲಕ್ಷಕ್ಕೂ ಹೆಚ್ಚು ಕೊರೊನಾ ಟೆಸ್ಟ್‌ಗಳನ್ನು ನಡೆಸುವ ಸಾಮರ್ಥ್ಯವನ್ನು ಭಾರತ ಹೊಂದಿದೆ ಎಂದರು.

ದಾವಣಗೆರೆ ಜಿಲ್ಲೆಯಲ್ಲಿಯೂ ಕೂಡ ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಇಂದು ಆಕ್ಸಿಜನ್ ಜನರೇಟರ್‌ಗಳನ್ನು ಹೊಂದಿವೆ. ಪ್ರತಿ ತಾಲ್ಲೂಕು ಆಸ್ಪತ್ರೆಯಲ್ಲಿ ಏಳೆಂಟು ವೆಂಟಿಲೇಟರ್‌ಗಳು ಆಕ್ಸಿಜನ್ ಬೆಡ್‌ಗಳು ಲಭ್ಯವಾಗಿವೆ. ದಾವಣಗೆರೆಯ ಆಸ್ಪತ್ರೆಯಲ್ಲಿ ಪ್ರತಿ ನಿಮಿಷಕ್ಕೆ 3000 ಲೀಟರ್ ಆಕ್ಸಿಜನ್ ಉತ್ಪಾದಿಸುವ ಜನರೇಟರ್‌ಗಳು ದೊರಕಿವೆ. ಈ ಹಿಂದೆ ದಶಕಗಳೇ ಉರುಳಿದರೂ ಕೆಲವೊಂದು ಸಾಂಕ್ರಾಮಿಕ ರೋಗಳಿಗೆ ವ್ಯಾಕ್ಸಿನ್ ಕಂಡುಹಿಡಿಯಲು ಸಾಧ್ಯವಾಗಿರಲಿಲ್ಲ. ಆದರೆ, ಕೇಂದ್ರ ಸರ್ಕಾರ ಕೊರೊನಾ ಸಾಂಕ್ರಾಮಿಕ ರೋಗಕ್ಕೆ ಕೇವಲ 8 ತಿಂಗಳಲ್ಲಿ ದೇಶೀಯ ವ್ಯಾಕ್ಸಿನ್‌ಗಳನ್ನು ತಯಾರಿಸಿ ಇಡೀ ಪ್ರಪಂಚವೇ ನಿಬ್ಬೆರಗಾಗುವಂತೆ ಮಾಡಿದೆ. ಡಿಸೆಂಬರ್ ಹೊತ್ತಿಗೆ ದೇಶದ ಶೇಕಡ 80 ರಷ್ಟು ಜನ ಲಸಿಕೆಗೆ ಒಳಪಡಲಿದ್ದಾರೆ ಎಂದು ಹೇಳಿದರು.

2020-21 ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಆರೋಗ್ಯ ಕ್ಷೇತ್ರಕ್ಕೆ 93 ಸಾವಿರ ಕೋಟಿಯನ್ನು ಆಯವ್ಯಯದಲ್ಲಿ ಮೀಸಲಿಟ್ಟಿತ್ತು, ಇದನ್ನು 2021-22 ನೇ ಸಾಲಿಗೆ 2.34 ಲಕ್ಷ ಕೋಟಿಗೆ ಏರಿಸಿದ್ದು ಸರ್ಕಾರದ ದೂರದೃಷ್ಟಿ ಎಂದು ಸಿದ್ದೇಶ್ವರ ಅವರು ವಿವರಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ದೈವಜ್ಞ ಸಮಾಜದ ಅಧ್ಯಕ್ಷ ಸತ್ಯನಾರಾಯಣ ಆರ್. ರಾಯ್ಕರ್, ಎ.ಜಿ.ವಿಠ್ಠಲ್, ಉತ್ತರ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್ ಹಾಗೂ ಇತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಬ್ಯೂಟಿ ಪಾರ್ಲರ್ ಅಸೋಸಿಯೇಷನ್ ಸದಸ್ಯರಿಗೆ ಎಸ್ಸೆಸ್ ಅವರಿಂದ ಉಚಿತ ಲಸಿಕೆ



ದಾವಣಗೆರೆ, ಜೂ.25- ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ದಾನ ಮಾಡಿರುವ ಕೋವಿಡ್ ಉಚಿತ ಲಸಿಕೆಯನ್ನು ಜಿಲ್ಲಾ ಬ್ಯೂಟಿ ಪಾರ್ಲರ್ ಅಸೋಸಿಯೇಷನ್ನಿನ ಎಲ್ಲಾ ಸದಸ್ಯರಿಗೆ ನೀಡಲಾಯಿತು.

ಬ್ಯೂಟಿಷಿಯನ್ ವೃತ್ತಿಯಲ್ಲಿರುವಂತಹ ಮಹಿಳೆಯರಿಗೆ ಕೊರೊನಾ ಸೋಂಕಿನಿಂದ ಉಂಟಾಗುತ್ತಿರುವ ಸಮಸ್ಯೆಗಳ ಸಂದರ್ಭದಲ್ಲಿ ಉಚಿತ ಲಸಿಕೆ ನೀಡುವುದರ ಮೂಲಕ ಆರೋಗ್ಯ ಕೊಡುವ ನಿಟ್ಟಿನಲ್ಲಿ ಸೇವೆ ಸಲ್ಲಿಸಿರುವ ಎಸ್ಸೆಸ್ ಅವರನ್ನು ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀಮತಿ ಕವಿತಾ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಗೀತಾ ರೆಡ್ಡಿ, ಪದ್ಮಾವತಿ, ಆಶಾ, ಶೈಲಾ, ಸೌಮ್ಯ ಮತ್ತಿತರರು ಸನ್ಮಾನಿಸುವುದರೊಂದಿಗೆ ಕೃತಜ್ಞತೆ ಸಲ್ಲಿಸಿದರು.

# ಪೆಟ್ರೋಲ್ ರೀತಿ ಆಕ್ಸಿಜನ್ ಸಂಗ್ರಹಕ್ಕೆ ಸುಪ್ರೀಂ ಸಮಿತಿ ಶಿಫಾರಸ್ಸು

ನವದೆಹಲಿ, ಜೂ. 25 - ಪೆಟ್ರೋಲ್ ರೀತಿಯಲ್ಲೇ ಆಕ್ಸಿಜನ್ ಅನ್ನು 2-3 ವಾರಗಳಿಗೆ ಆಗುವಷ್ಟು ಸಂಗ್ರಹಿಸಲು ಸುಪ್ರೀಂ ಕೋರ್ಟ್‌ನಿಂದ ನೇಮಕವಾದ ರಾಷ್ಟ್ರೀಯ ಕಾರ್ಯಪಡೆ (ಎನ್‌ಟಿಎಫ್) ಶಿಫಾರಸ್ಸು ಮಾಡಿದೆ.

12 ಪರಿಣಿತರ ಎನ್‌ಟಿಎಫ್ ತನ್ನ ಶಿಫಾರಸ್ಸು ಸಲ್ಲಿಸಿದ್ದು, ಎಲ್ಲಾ ಆಸ್ಪತ್ರೆಗಳು ತುರ್ತು ಸಂದರ್ಭಕ್ಕೆ ಹೆಚ್ಚುವರಿ ದಾಸ್ತಾನು ಹೊಂದಿರಬೇಕು. ಆಕ್ಸಿಜನ್ ಮೇಲೆ ನಿಗಾ ವಹಿಸಲು ಹಿರಿಯ ಸಿಬ್ಬಂದಿಯ ಸಮಿತಿ ರಚಿಸಬೇಕು ಎಂದು ಶಿಫಾರಸ್ಸು ಮಾಡಲಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳ ರೀತಿಯಲ್ಲೇ 2-3 ವಾರಗಳಿಗೆ ಅಗತ್ಯವಾಗುವಷ್ಟು ಆಕ್ಸಿಜನ್ ದಾಸ್ತಾನು ಹೊಂದಿರಬೇಕು. ಇದೇ ರೀತಿ ಆಸ್ಪತ್ರೆಗಳೂ ತುರ್ತು ಸಂದರ್ಭಕ್ಕೂ ಹೆಚ್ಚುವರಿ ದಾಸ್ತಾನು ಹೊಂದಿರಬೇಕು ಎಂದು ತಿಳಿಸಲಾಗಿದೆ.

ಕೊರೊನಾ ಸಂದರ್ಭದಲ್ಲಿ ಅಗತ್ಯವಾಗುವ ದಾಸ್ತಾನು ಅಂದಾಜಿಸಿ, ಶೇ.20ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಮಾಡಬೇಕು. ಆಕ್ಸಿಜನ್ ಉತ್ಪಾ ದನಾ ಘಟಕಗಳ ಸಾಮರ್ಥ್ಯವನ್ನು ಶೇ.5ರಿಂದ ಶೇ.8ಕ್ಕೆ ಹೆಚ್ಚಿಸಬೇಕು. ಸರ್ಕಾರ ಇದಕ್ಕಾಗಿ ಬೆಂಬಲ ಹಾಗೂ ಸಬ್ಸಿಡಿ ನೀಡಬೇಕು ಎಂದು ಸಮಿತಿ ಹೇಳಿದೆ.



# ಹರಪನಹಳ್ಳಿ ತಾ.ನಲ್ಲಿ ಶಿಕ್ಷಕರ ವಿನೂತನ ಪ್ರಯೋಗ

ಹರಪನಹಳ್ಳಿ, ಜೂ.25- ತಾಲ್ಲೂಕಿನ ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ. ವೀರಭದ್ರಯ್ಯನವರ ಮಾರ್ಗದರ್ಶನದಲ್ಲಿ ಮಕ್ಕಳನ್ನು ಶಾಲೆಯತ್ತ ಆಕರ್ಷಿಸಲು ವಿವಿಧ ಪ್ರಯೋಗಗಳನ್ನು ಮಾಡುತ್ತಿದ್ದಾರೆ.

ಹಾರಕನಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು, ಸಹಶಿಕ್ಷಕರು ಮಕ್ಕಳಿಗೆ ಕಿರೀಟ ತೊಡಿಸಿ ಮಹಾರಾಜ ಪದವಿ ಸಿಗಲೆಂದು ಗುರು ವೃಂದದಿಂದ ಆಶೀರ್ವದಿಸಿ, ಎಲ್ಲರನ್ನೂ ಪ್ರೀತಿಯಿಂದ ಸ್ವಾಗತಿಸಿದರು. ಪಾಲಕರಿಗೂ ಕಿರೀಟ ತೊಡಿಸಿದ್ದು ಖುಷಿ ನೀಡಿತ್ತಲ್ಲದೆ ಈ ವಿಶಿಷ್ಟ ಸ್ವಾಗತ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

# ದಾವಣಗೆರೆ ಕ್ಲಬ್‌ನಲ್ಲಿ ಉಚಿತ ಕೋವಿಡ್ ಲಸಿಕಾ ಶಿಬಿರ



ದಾವಣಗೆರೆ, ಜೂ.25- ಜಿಲ್ಲಾಡಳಿತದಿಂದ ದಾವಣಗೆರೆ ಕ್ಲಬ್ ನ ಸದಸ್ಯರು ಮತ್ತು ಅವರ ಕುಟುಂಬದವರಿಗಾಗಿ ದಾವಣಗೆರೆ ಕ್ಲಬ್ ಕಚೇರಿಯಲ್ಲಿ ಕೋವಿಡ್ ಉಚಿತ ಲಸಿಕೆ ಶಿಬಿರವು ಇಂದು ನಡೆಯಿತು. ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ. ಮೀನಾಕ್ಷಿ ಅವರು ಶಿಬಿರದಲ್ಲಿ ಪಾಲ್ಗೊಂಡು ಮಾರ್ಗದರ್ಶನ ನೀಡಿದರು. ದಾವಣಗೆರೆ ಕ್ಲಬ್‌ನ ಅಧ್ಯಕ್ಷ ಮತ್ತಿಹಳ್ಳಿ ವೀರಣ್ಣ ಅವರ ನೇತೃತ್ವದಲ್ಲಿ ಉಪಾಧ್ಯಕ್ಷ ಎ.ಬಿ.ಚಂದ್ರಶೇಖರ್, ಕಾರ್ಯದರ್ಶಿ ರವಿಶಂಕರ್ ಪಲ್ಲಾಗಟ್ಟೆ, ಸಹ ಕಾರ್ಯದರ್ಶಿ ಎಸ್.ಜಿ.ಉಳವಯ್ಯ, ಕೋಶಾಧ್ಯಕ್ಷ ಲಿಂಗರಾಜ ವಾಲಿ, ನಿರ್ದೇಶಕರುಗಳಾದ ಸದಾನಂದ್ ಬೆಳ್ಳೂಡಿ, ಹೆಚ್.ವಿ.ರುದ್ರೇಶ್, ತಿಮ್ಮರಾಜ್ ಗುಪ್ತ ಮತ್ತಿತರರು ಕಾರ್ಯಕ್ರಮದ ಮುಂದಾಳತ್ವ ವಹಿಸಿದ್ದರು.

# ಡೆಲ್ಟಾ ಪ್ಲಸ್ ತಡೆಗೆ ಪರೀಕ್ಷೆ ಏಕಿಲ್ಲ? ಕೇಂದ್ರಕ್ಕೆ ರಾಹುಲ್ ಗಾಂಧಿ ಪ್ರಶ್ನೆ



ನವದೆಹಲಿ, ಜೂ.25 - ಕೊರೊನಾದ ಡೆಲ್ಟಾ ಪ್ಲಸ್ ರೂಪಾಂತರಿ ಹರಡುವುದನ್ನು ತಡೆಯಲು ಏಕೆ ದೊಡ್ಡ ಪ್ರಮಾಣದಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿಲ್ಲ? ಹಾಗೂ ಅದು ಲಸಿಕೆಗಳ ವಿರುದ್ಧ ಎಷ್ಟು ಪರಿಣಾಮಕಾರಿ ಎಂಬುದನ್ನು ತಿಳಿಯಲು ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ? ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ದೇಶದಲ್ಲಿ ಕಂಡು ಬರುತ್ತಿರುವ ಡೆಲ್ಟಾ ಪ್ಲಸ್ ಕಳವಳಕಾರಿ ರೂಪಾಂತರಿ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇದರಿಂದ ದೇಶದಲ್ಲಿ ಮೂರನೇ ಅಲೆ ಬರಬಹುದು ಎಂದು ಕೆಲ ಪರಿಣಿತರು ಹೇಳುತ್ತಿದ್ದಾರೆ.

ಡೆಲ್ಟಾ ಪ್ಲಸ್ ಲಸಿಕೆಯ ವಿರುದ್ಧ ಎಷ್ಟು ಪರಿಣಾಮಕಾರಿ ಎಂಬ ಮಾಹಿತಿ ಯಾವಾಗ ಲಭ್ಯವಾಗಲಿದೆ? ಕೊರೊನಾ ಮೂರನೇ ಅಲೆ ನಿಯತ್ರಿಸಲು ಯೋಜನೆ ಏನು ಎಂದವರು ಟ್ವೀಟ್ ಮೂಲಕ ಪ್ರಶ್ನಿಸಿದ್ದಾರೆ.

# ಹವಾಮಾನ ಆಧಾರಿತ ಬೆಳೆ ವಿಮೆ

ದಾವಣಗೆರೆ, ಜೂ.25- ಪ್ರಸಕ್ತ ಸಾಲಿನ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ (ಆರ್-ಡಬ್ಲ್ಯುಬಿಸಿಐಎಸ್) ತೋಟಗಾರಿಕೆ ಬೆಳೆಗಳಾದ ಅಡಿಕೆ, ದಾಳಿಂಬೆ, ವೀಳ್ಯದೆಲೆ, ಕಾಳುಮೆಣಸು ಬೆಳೆಗಳಿಗೆ ಪ್ರಸಕ್ತ ಮುಂಗಾರು ಹಂಗಾಮಿನ ಬೆಳೆಗಳ ಸಂಯೋಜನೆಗಳನ್ನು ಅಧಿಸೂಚಿಸಲಾಗಿದ್ದು, ವಿಮೆ ನೋಂದಣಿ ಮಾಡಿಸಲು ಇದೇ ದಿನಾಂಕ 30 ಕೊನೆಯ ದಿನವಾಗಿದೆ.

**ನೋಂದಣಿಗೆ 5 ದಿನ ಬಾಕಿ**

ಅಡಿಕೆ, ದಾಳಿಂಬೆ, ವೀಳ್ಯದೆಲೆ, ಕಾಳುಮೆಣಸು ಬೆಳೆಗಳ ವಿಮೆ ನೋಂದಾಯಿಸಲು ಕೇವಲ 5 ದಿನಗಳು ಬಾಕಿ ಇದ್ದು, ರೈತ ಬಾಂಧವರು ಹೆಚ್ಚಿನ ರೀತಿಯಲ್ಲಿ ನೋಂದಣಿ ಮಾಡಿಸಬೇಕು ಹಾಗೂ ತಾಲ್ಲೂಕು ಮತ್ತು ಹೋಬಳಿ ಮಟ್ಟದ ಗ್ರಾಹಕರ ಸೇವಾ ಕೇಂದ್ರದಲ್ಲಿ ನೋಂದಣಿ ಪ್ರಕ್ರಿಯೆ ಲಭ್ಯವಿದ್ದು, ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕೆಂದು ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

# ತರಳಬಾಳು ಕೋವಿಡ್ ಕೇರ್ ಸೆಂಟರ್‌ನಲ್ಲಿ ಗುರು ನಮನ



ದಾವಣಗೆರೆ, ಜೂ.25 - ನಗರದ ತರಳಬಾಳು ಕೋವಿಡ್ ಸೆಂಟರ್‌ನಲ್ಲಿ ಕೊರೊನಾ ಸೋಂಕಿತರು ತರಳಬಾಳು ಸೇವಾ ಸಮಿತಿ ಸದಸ್ಯರನ್ನು ಕರೆಸಿ ತರಳಬಾಳು ಜಗದ್ಗುರುಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಜಗದ್ಗುರುಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ತರಳಬಾಳು ಸೇವಾ ಸಮಿತಿ ಅಧ್ಯಕ್ಷ ಶಶಿಧರ್ ಹೆಮ್ಮನಬೇತೂರು ಮಾತನಾಡಿ, ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳವರು ತಮಗೆ ಸೇವೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದ ತಿಳಿಸಿದರು. ಈಗಾಗಲೇ ತರಬಾಳು ಸೆಂಟರ್‌ನಲ್ಲಿ 406 ಜನ ಗುಣಮುಖರಾಗಿದ್ದು, ಅವರೆಲ್ಲರೂ ತಮ್ಮ ಮನೆಗಳಿಗೆ ತೆರಳಿದ್ದಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮೆಳ್ಳೇಕಟ್ಟೆ ಶ್ರೀನಿವಾಸ್ ಮಾತನಾಡಿ, ಇಲ್ಲಿವರೆಗೆ ಸಹಕರಿಸಿದ ದಾನಿಗಳಿಗೆ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿದರು.

ಮಾಗನೂರು ಉಮೇಶ್ ಗೌಡ್ರು, ಪ್ರಭು ಕಾವಲಹಳ್ಳಿ, ಲಿಂಗರಾಜ್ ಅಗಸನಕಟ್ಟೆ, ಸತೀಶ್ ಸಿರಿಗೆರೆ, ಧನ್ಯಕುಮಾರ್ ಎಲೆಬೇತೂರು, ಕೋಟೆಗೆರೆ ಶಿವಕುಮಾರ್, ಪರಮೇಶ್ವರಪ್ಪ ಕಕ್ಕರಗೊಳ್ಳ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಜಿಲ್ಲೆಯಲ್ಲಿ ಎಲ್ಲಾ ಗ್ರಂಥಾಲಯಗಳ ಕಾರ್ಯಾರಂಭ

ದಾವಣಗೆರೆ, ಜೂ.25- ಜಿಲ್ಲೆಯಲ್ಲಿ ಎಲ್ಲಾ ಗ್ರಂಥಾಲಯಗಳನ್ನು ತೆರೆಯಲು ಸರ್ಕಾರ ಅನುಮತಿಸಿದ್ದು, ವಾರಾಂತ್ಯದ ದಿನಗಳು ಹಾಗೂ ಸಾರ್ವತ್ರಿಕ ರಜೆ ದಿನಗಳನ್ನು ಹೊರತುಪಡಿಸಿ ಪ್ರತಿದಿನ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ಸಾರ್ವಜನಿಕರಿಗಾಗಿ ಗ್ರಂಥಾಲಯಗಳು ಲಭ್ಯವಿರಲಿವೆ. ತಾತ್ಕಾಲಿಕವಾಗಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಗ್ರಂಥಾಲಯಗಳನ್ನು ತೆರೆದು ಸಾರ್ವಜನಿಕರಿಗೆ ಸೇವೆ ಸಲ್ಲಿಸಲು ಅನುಮತಿ ನೀಡಿದೆ. ಈ ಆದೇಶವು ಜುಲೈ 5 ರವರೆಗೆ ಜಾರಿಯಲ್ಲಿರುತ್ತದೆ ಎಂದು ಮುಖ್ಯ ಗ್ರಂಥಾಲಯಾಧಿಕಾರಿ ತಿಪ್ಪೇಸ್ವಾಮಿ ತಿಳಿಸಿದ್ದಾರೆ.

# ನಾಡಿದ್ದು ಉಸ್ತುವಾರಿ ಸಚಿವರ ಪ್ರವಾಸ



ದಾವಣಗೆರೆ, ಜೂ. 25- ನಗರಾಭಿವೃದ್ಧಿ ಖಾತೆ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರು ಇದೇ ದಿನಾಂಕ 28 ಮತ್ತು 29 ರಂದು ಎರಡು ದಿನಗಳ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಇದೇ ದಿನಾಂಕ 28 ರ ಬೆಳಿಗ್ಗೆ 10 ಗಂಟೆಗೆ ಚನ್ನಗಿರಿ, ಮಧ್ಯಾಹ್ನ 3 ಗಂಟೆಗೆ ಹೊನ್ನಾಳಿ, ಸಂಜೆ 4.30 ಗಂಟೆಗೆ ಹರಿಹರದಲ್ಲಿ ನಡೆಯುವ ಕಾರ್ಯ ಕ್ರಮಗಳಲ್ಲಿ ಸಚಿವರು ಭಾಗವಹಿಸುವರು. ದಿನಾಂಕ 29 ರಂದು ಬೆಳಿಗ್ಗೆ 10.30 ಕ್ಕೆ ದಾವಣಗೆರೆಯ ಕಾರ್ಯಕ್ರಮ ಗಳಲ್ಲಿ ಪಾಲ್ಗೊಳ್ಳುವರು.

# ಪ್ರತಿಯೊಬ್ಬರೂ ಲಸಿಕೆ ಪಡೆಯಲು ಬಿಹೆಚ್‌ವಿ ಕರೆ

ದಾವಣಗೆರೆ, ಜೂ.25- ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ಇಲಾಖೆ ವತಿಯಿಂದ ಬಂಜಾರ (ಲಂಬಾಣಿ) ತಾಂಡಾಗಳಲ್ಲಿ ಕೊರೊನಾ ಲಸಿಕೆ ಜಾಗೃತಿ ಅಭಿಯಾನವನ್ನು ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ತ್ಯಾವಣಿಗಿ, ಮಿಯ್ಯಾಪುರ ತಾಂಡಾಗಳಲ್ಲಿ ಇಂದು ನಡೆಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ಇಲಾಖೆ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ಅವರು ಅಭಿಯಾನದ ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವಂತೆ ಕರೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷ ಡಾ॥ ತುಳಸಿನಾಯ್ಕ ಅವರು ಲಸಿಕೆ ಬಗ್ಗೆ ಮಾಹಿತಿ ನೀಡಿದರು. ರಾಜ್ಯ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷ ನಾಗರಾಜ್ ನಾಯ್ಕ್ ಸೋಮಲಾಪುರ ತಾಂಡಾ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.



ಅಸಂಘಟಿತ ಕಾರ್ಮಿಕರ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಎಸ್. ನಂಜಾನಾಯ್ಕ್, ಕಬ್ಬಳ, ಗ್ರಾಮದ ಮುಖಂಡ ಈಶ್ವರ್ ನಾಯ್ಕ್, ಗ್ರಾ.ಪಂ ಸದಸ್ಯರೂ ಆದ ಪರಿಶಿಷ್ಟ ಜಾತಿಯ ಬ್ಲಾಕ್ ಅಧ್ಯಕ್ಷ ಶಿವಗಾನಾಯ್ಕ್, ಗ್ರಾ.ಪಂ. ಮಾಜಿ ಸದಸ್ಯರಾದ ಸೋನಾಬಾಯಿ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

# ಭದ್ರಾ ಅಚ್ಚುಕಟ್ಟು ಪ್ರದೇಶಗಳಿಗೆ ಪವಿತ್ರ ರಾಮಯ್ಯ ಭೇಟಿ

ಮಲೇಬೆನ್ನೂರು, ಜೂ. 25 - ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ಬಸವಾಪಟ್ಟಣ ಮತ್ತು ಹರ್ಲೀಪುರ ಗ್ರಾಮಗಳಿಗೆ ನೀರಾವರಿ ಹಾಗೂ ಕಾಡಾ ಅಧಿಕಾರಿಗಳೊಂದಿಗೆ ಭದ್ರಾ ಕಾಡಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಅವರು ಶುಕ್ರವಾರ ಭೇಟಿ ನೀಡಿ, ಹರ್ಲೀಪುರ ಹಾಗೂ ಕೋಟೆಹಾಳ್ ನೀರು ಬಳಕೆದಾರರ ಸಹಕಾರ ಸಂಘದವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಬಳಸಿಕೊಂಡು ನಾಲೆಗಳಲ್ಲಿ ತುಂಬಿರುವ ಹೂಳು ಮತ್ತು ಜಂಗಲ್ ಎತ್ತಿಸುವ ಕೆಲಸ ಕೈಗೊಂಡು ನಾಲೆಗಳನ್ನು ಸ್ವಚ್ಛಗೊಳಿಸಿದ ಕಾಮಗಾರಿಯನ್ನು ಪರಿಶೀಲಿಸಿದರು.

ಸಮಗ್ರ ಕೆರೆ ಅಭಿವೃದ್ಧಿ ಯೋಜನೆ ಬಳಸಿಕೊಂಡು ನಡೆಯುತ್ತಿರುವ ಕೆರೆ ರಿವಿಟ್ಮೆಂಟ್ ಕಾಮಗಾರಿ ಹಾಗೂ ನಮ್ಮ ಹೊಲ ನಮ್ಮ ರಸ್ತೆ ಯೋಜನೆ ಉಪಯೋಗಿಸಿಕೊಂಡು



ಚಾನೆಲ್ ಏರಿ ರಸ್ತೆ ಅಭಿವೃದ್ದಿ ಪಡಿಸಿರುವುದನ್ನು ಪವಿತ್ರ ಅವರು ವೀಕ್ಷಿಸಿದರು.

ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರಕ್ಕೆ ಅನುದಾನ ನೀಡುವಂತೆ ಒತ್ತಾಯಿಸುವ ಮೂಲಕ ಭದ್ರಾ ಅಚ್ಚುಕಟ್ಟು ಭಾಗವನ್ನು ಅಭಿವೃದ್ದಿ ಪಡಿಸುವಂತೆ ರೈತರು ಕೇಳಿಕೊಂಡರು.

ಈ ಹಿಂದೆ ನೀರು ಬಳಕೆದಾರರ ಸಂಘಗಳ ಮೂಲಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಅವಕಾಶವಿತ್ತು, ಆಗ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುತ್ತಿದ್ದೆವು, ಆದರೆ, ಈಗ ಇ - ಟೆಂಡರ್ ಮೂಲಕ ಅವಕಾಶ ನೀಡಿರುವ ಪರಿಣಾಮ ಗುತ್ತಿಗೆದಾರರು ಕಡಿಮೆ ಬೆಲೆಗೆ ಕೋಟ್ ಮಾಡಿ ಗುಣಮಟ್ಟದ ಕಾಮಗಾರಿ ಮಾಡುವ ವಿಶ್ವಾಸ ಇಲ್ಲದಂತಾಗಿದೆ. ಹಾಗಾಗಿ ಇದನ್ನು ಬದಲಿಸಿ ಸಂಘಗಳನ್ನು ಗಟ್ಟಿ ಗೊಳಿಸುವಂತೆ ಇಲ್ಲವೇ ಪರ್ಯಾಯ ಆದಾಯ ಮೂಲವನ್ನು ಮಾಡಿಕೊಡುವಂತೆ ರೈತರು ಪವಿತ್ರ ರಾಮಯ್ಯ ಅವರನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರ ಧನಂಜಯ್, ನೀರು ಬಳಕೆದಾರರ ಸಂಘದ ಸತೀಶ್, ರವಿ, ನಾಗರಾಜ್ ಹಾಗೂ ನರೇಗಾ ಅಧಿಕಾರಿ ರವಿ ಪಾಟೀಲ್, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಮಮತಾ, ಸದಸ್ಯರಾದ ಧರ್ಮೇಗೌಡ, ಶಿವಮೂರ್ತಿ, ಪಿಡಿಒ ಆನಂದ್, ಉಪಸ್ಥಿತರಿದ್ದರು.

॥ ಶ್ರೀ ಕಾಶಿಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ**



ಜನನ : 24-10-1965 ಮರಣ : 19-06-2021

ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ವಾಸಿಗಳಾದ
ಶ್ರೀ ಕೆ.ಎಸ್. ಷಡಾಕ್ಷರಪ್ಪ ಮತ್ತು ಮಕ್ಕಳು
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ 19.6.2021ರ ಶನಿವಾರ ಬೆಳಿಗ್ಗೆ 7 ಕ್ಕೆ ನನ್ನ ಹಿರಿಯ ಪುತ್ರನಾದ
**ಶ್ರೀ ಕೆ.ಎಸ್. ರುದ್ರೇಶ್**
(ಶ್ರೀಮತಿ ಕರಿಬಸಮ್ಮ ಇವರ ಪತಿ)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 27.06.2021ನೇ ಭಾನುವಾರ ಬೆಳಿಗ್ಗೆ 10.30ಕ್ಕೆ
ಕಾಶೀಪುರ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು
ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು,
ಶ್ರೀ ಕೆ.ಎಸ್. ಷಡಾಕ್ಷರಪ್ಪ ಮತ್ತು ಮಕ್ಕಳು
ಮೃತರ ಧರ್ಮಪತ್ನಿ ಶ್ರೀಮತಿ ಕರಿಬಸಮ್ಮ ಮತ್ತು ಮಕ್ಕಳು
ಹಾಗೂ ಬಂಧು-ಮಿತ್ರರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte